ಬ್ರಾಹ್ಮಧರ್ಮ

ಬ್ರಹ್ಮೋಪಾಸನೆ

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ

ಪ್ರೊ|| ಸಾ. ಕೃ. ರಾಮಚಂದ್ರ ರಾವ್

ವೂಡೇ ಪ್ರತಿಷ್ಠಾನದ ಪರವಾಗಿ

ಪ್ರಭಾ ಮುದ್ರಣಾಲಯ

22-A, ಡಾ|| ಡಿ. ವಿ. ಗುಂಡಪ್ಪ ರಸ್ತೆ

ಬಸವನಗುಡಿ, ಬೆಂಗಳೂರು–560 004

ಬ್ರಾಹ್ಮಧರ್ಮ

ಬ್ರಹ್ಮೋಪಾಸನೆ

(ಮಹರ್ಷಿ ದೇವೇಂದ್ರನಾಥ ಠಾಕುರರು ಕೈಗೊಂಡ ಉಪನಿಷತ್
ಸಂಕಲನ, ಟೀಕೆ, ವ್ಯಾಖ್ಯಾನ, ತಾತ್ಪರ್ಯ)

ಮೂಲಬಂಗಾಳಿಯಿಂದ ಅನುವಾದ
ಸ್ವಂತ ವಿವರಣೆಗಳೊಂದಿಗೆ

ಪ್ರೊ ॥ ಸಾ. ಕೃ. ರಾಮಚಂದ್ರ ರಾವ್

ವೂಡೇ ಪ್ರತಿಷ್ಠಾನದ ಪರವಾಗಿ

ಪ್ರಭಾ ಮುದ್ರಣಾಲಯ
22–A, ಡಾ ॥ ಡಿ. ವಿ. ಗುಂಡಪ್ಪ ರಸ್ತೆ
ಬಸವನಗುಡಿ, ಬೆಂಗಳೂರು – 560 004

BRAHMOPASANE, being the handbook of the Brahmo Philosophy based on the Upanishads by Prof. S. K. Rama Chandra Rao, Published by Prabha Printing House 22–A, Dr. D. V. Gundapa Road, Basavanagudi, Bangalore–4 for Wooday Foundation, 30/A, 8th 'A' Main Road, Rajmahal Vilas Extension, Bangalore–560 080

© First Edition, 1999 Wooday Foundation

ಬೆಲೆ : ಆರು ರೂಪಾಯಿ

ಮುದ್ರಕರು :

ಪ್ರಭಾ ಮುದ್ರಣಾಲಯ

22–ಎ, ಡಾ. ಡಿ. ವಿ. ಗುಂಡಪ್ಪ ರಸ್ತೆ, ಬೆಂಗಳೂರು – 560 004

ಅರ್ಪಣೆ

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪ

೧೮೮೪–೧೯೭೭

ಇವರ ಸವಿನೆನಪಿಗಾಗಿ

ಪ್ರಕಾಶಕರ ನುಡಿ

ಸುಪ್ರಸಿದ್ಧ ಸಮಾಜಸೇವಕರ್ತರೂ, ನಿಷ್ಠಾವಂತರಾದ ಸ್ವಾತಂತ್ರ್ಯ ಯೋಧರೂ, ದಕ್ಷಿಣಭಾರತದಲ್ಲಿ ಬ್ರಾಹ್ಮಸಮಾಜದ ಪ್ರವರ್ತಕರೂ ಆಗಿದ್ದ ಶ್ರೀಯುತ ಡಬ್ಲ್ಯೂ. ಎಚ್. ಹನುಮಂತಪ್ಪನವರ (೧೮೮೫–೧೯೭೭) ಪುಣ್ಯಸ್ಮೃತಿಗೆ ಈ ಪುಸ್ತಕವನ್ನು ಸಮರ್ಪಿಸುವುದು ನಮಗೆ ಸಂತೋಷದ, ಗೌರವದ ವಿಷಯವಾಗಿದೆ. ಶ್ರೀಯುತ ಹನುಮಂತಪ್ಪನವರು ತಮ್ಮ ಹದಿನಾರನೆಯ ವಯಸ್ಸಿನಲ್ಲೇ ರಾಜಾ ರಾಮಮೋಹನ್ ರಾಯರಿಂದ ಸ್ಫೂರ್ತಿಪಡೆದು, ಅವರು ಸಂಸ್ಥಾಪಿಸಿದ್ದ ಬ್ರಾಹ್ಮಸಮಾಜ ಆಂದೋಲನದಲ್ಲಿ ಭಾಗಿಗಳಾದರು. ತಮ್ಮ ಜೀವಮಾನದುದ್ದಕ್ಕೂ ಔಪನಿಷದ ದರ್ಶನವಾಗಿರುವ ಏಕದೈವ ಮತ್ತು ಮಾನವ ಭ್ರಾತೃತ್ವ ಎಂಬೆರೆಡು ಕಲ್ಪನೆಗಳನ್ನು ಕಾರ್ಯಗತ ಮಾಡಲು ಶ್ರಮಿಸಿದರು; ಬೇರೆ ಬೇರೆ ಮತಧರ್ಮಗಳನ್ನು ಒಂದು ನೆಲೆಯಲ್ಲಿ ಸಂಘಟಿಸಿರುವ ಕೆಲಸವನ್ನು ಕೈಗೊಂಡಿದ್ದರು.

ಉಪನಿಷತ್ತುಗಳ ಸಂದೇಶವನ್ನು ಸ್ವಾರಸ್ಯವನ್ನು ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಮುಟ್ಟಿಸಬೇಕೆನ್ನುವ, ಇದರ ಪ್ರಯೋಜನವು ಎಲ್ಲರಿಗೂ ದೊರೆಯುವಂತೆ ಮಾಡಬೇಕನ್ನುವ, ಅಪೇಕ್ಷೆ ಅವರಿಗೆ ಉತ್ಕಟವಾಗಿದ್ದಿತು. ಅವರ ಅಪೇಕ್ಷೆಯನ್ನು ನಿಧಾನವಾಯಿತಾದರೂ ಈಗ ಪೂರೈಸಬೇಕೆಂದು ವೂಡೇ ಪ್ರತಿಷ್ಠಾನ ಸಂಸ್ಥೆಯು ನಿರ್ಧರಿಸಿ, ಈ ಪುಸ್ತಕವನ್ನು ಹೊರತರುತ್ತಿದೆ. ವೂಡೇ ಪ್ರತಿಷ್ಠಾನ ಸಂಸ್ಥೆಯು ಸಾರ್ವಜನಿಕ ಸಹಾಯಾರ್ಥ ಸೇವೆಯಲ್ಲಿ ತೊಡಗಿದೆ. 'ವೂಡೇ' ಎಂಬುದು ಶ್ರೀಯುತ ಹನುಮಂತಪ್ಪನವರ ಮನೆತನದ ಹೆಸರು; ಅವರ ಮನೆತನದವರೇ ಈ ಸಂಸ್ಥೆಯನ್ನು ಏರ್ಪಡಿಸಿದ್ದಾರೆ. ಸಂಸ್ಥೆಯಿಂದ ಉಪನಿಷತ್ತುಗಳನ್ನು ಕುರಿತಂತೆ ಹಲವು ಪ್ರಕಟಣೆಗಳನ್ನು ಹೊರತರುವ ಅಪೇಕ್ಷೆಯಿದೆ; ಮೊದಲನೆಯ ಪುಸ್ತಕ ಈಗಾಗಲೇ ಹೊಂಬಂದಿದೆ. ಬ್ರಹ್ಮಸಮಾಜದ ಧೋರಣೆಯನ್ನೂ ನಿಲುವನ್ನೂ ಸ್ಪಷ್ಟಪಡಿಸುವ ಉದ್ದೇಶದಿಂದ ಮಹರ್ಷಿ ದೇವೇಂದ್ರನಾಥ ಠಾಕುರರು ಸಿದ್ಧಪಡಿಸಿದ 'ಬ್ರಹ್ಮೋಪಾಸನೆ' ಎಂಬ ಮೌಲಿಕಗ್ರಂಥವು ಈಗ ನಿಮ್ಮ ಕೈಸೇರುತ್ತಿದೆ. ಮುಂದಿನ ಪುಸ್ತಕ ಅವರೇ ಸಂಕಲನ

ಮಾಡಿದ 'ಬ್ರಾಹ್ಮಧರ್ಮ' ಎಂಬುದು. ಪುಸ್ತಕದ ಬೆಲೆ ತೀರ ಕಡಮೆಯಾಗಿರಬೇಕೆಂದೂ, ಎಲ್ಲ ವರ್ಗದ ಜನರಿಗೂ ಅದು ಮುಟ್ಟಬೇಕೆಂದೂ ನಿರ್ಧರಿಸಲಾಗಿದೆ; ಮುದ್ರಣ ಪ್ರಕಾಶನದ ವೆಚ್ಚವನ್ನು ಮೇಲ್ಕಂಡ ಸಂಸ್ಥೆಯೇ ವಹಿಸಿಕೊಂಡಿದೆ.

ವಿಖ್ಯಾತ ವಿದ್ವಾಂಸರಾದ ಪ್ರೊ ಎಸ್. ಕೆ. ರಾಮಚಂದ್ರರಾಯರು ದಯೆಯಿಟ್ಟು, ಸಂತೋಷದಿಂದ, ನಮ್ಮ ಕೋರಿಕೆಯನ್ನು ಮನ್ನಿಸಿ ಈ ಪುಸ್ತಕವನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಪ್ರಭಾ ಮುದ್ರಣಾಲಯದ ಮಾಲೀಕರಾದ ಶ್ರೀ ಡಿ. ಎಸ್. ಕೃಷ್ಣಾಚಾರ್ಯರು ಈ ಪುಸ್ತಕದ ಮುದ್ರಣದ ಹೊಣೆಯನ್ನು ಹೊತ್ತಿದ್ದಾರೆ. ಅವರಿಗೂ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಈ ಪುಸ್ತಕವು ಶ್ರೀಯುತ ಹನುಮಂತಪ್ಪನವರ ನಿರೀಕ್ಷೆಯನ್ನು ಸ್ವಲ್ಪವಾದರೂ ಸಫಲಮಾಡುವಂತಾದರೆ ನಾವು ಕೃತಕೃತ್ಯರು.

ಬೆಂಗಳೂರು
ಅಕ್ಟೋಬರ್ ೧೪, ೧೯೯೯

ಡಬ್ಲ್ಯು. ಎಚ್. ಪುಟ್ಟಯ್ಯ
ಅಧ್ಯಕ್ಷರು
ವೂಡೇ ಪ್ರತಿಷ್ಠಾನ

ಮೊದಲಮಾತು

ನಮ್ಮ ನಾಡಿನ ಆಧುನಿಕಯುಗದ ಪ್ರವರ್ತಕರೆನಿಸಿದ, ನವೋದಯ ಸಂದರ್ಭದ ಅಧ್ವರ್ಯುವೆನಿಸಿದ ರಾಜಾ ರಾಮಮೋಹನರಾಯರು (1774–1833) ಉಪನಿಷತ್ತುಗಳ ನೆಲೆಯೇ ಹಿಂದೂಧರ್ಮದ ದಿಟವಾದ ನಿಲುವು, ಔಪನಿಷದ ದರ್ಶನವೇ ಅಂದಿಗೂ ಇಂದಿಗೂ ಪ್ರಸ್ತುತವಾದ ಧರ್ಮ ಎಂಬುದನ್ನು ಮನಗಂಡು ಅದನ್ನು ಜನರಿಗೆ ತಿಳಿಯಹೇಳಲು ಕಲ್ಕತ್ತೆಯಲ್ಲಿ 'ಆತ್ಮೀಯ ಸಭೆ'ಯೊಂದನ್ನು 1815 ರಲ್ಲಿ ಏರ್ಪಡಿಸಿದರು. ಇದೇ ಮುಂದೆ 1828ರ ಆಗಸ್ಟ್ 20 ರಂದು ಬ್ರಾಹ್ಮಸಮಾಜವೆಂಬ ಹೆಸರಿನಿಂದ ಸ್ಥಾಪನೆಗೊಂಡಿತು. ಇದಾದ ಐದು ವರ್ಷಗಳಲ್ಲೇ ರಾಮಮೋಹನರಾಯರು ತೀರಿಕೊಂಡರಾಗಿ, ಸಮಾಜವನ್ನು ಅವರ ಮಿತ್ರರಾಗಿದ್ದ ದ್ವಾರಕನಾಥ ಠಾಕುರರೂ ರಾಮಚಂದ್ರ ವಿದ್ಯಾವಾಗೀಶರೆಂಬುವರೂ ಹೇಗೋ ನಡೆಸಿಕೊಂಡು ಬರುತ್ತಿದ್ದರು.

ರಾಮಮೋಹನರಾಯರು ಸಾಯುವ ಕಾಲಕ್ಕೆ ಬ್ರಾಹ್ಮಸಮಾಜದ ವಿಧಿವಿಧಾನಗಳೇನನ್ನೂ ವ್ಯವಸ್ಥೆ ಮಾಡಿರಲಿಲ್ಲ. ಸದಸ್ಯರಿಗೆ ನಿಯಮಗಳಾಗಲಿ, ಕಟ್ಟು ಕಟ್ಟಳೆಗಳಾಗಲಿ ಏರ್ಪಟ್ಟಿರಲಿಲ್ಲ. ಕಡೆಗೆ ಬ್ರಾಹ್ಮಸಮಾಜಕ್ಕೆ ವಿಶಿಷ್ಟವಾದ ಸಂಹಿತೆಯನ್ನೂ ಸಿದ್ಧಪಡಿಸಿರಲಿಲ್ಲ. ಈ ಕೊರತೆಯನ್ನು ನೀಗಿಸಿದವರು ರಾಮಮೋಹನರಾಯರಿಂದ ಪ್ರಭಾವಿತರಾದವರೂ, ದ್ವಾರಕನಾಥ ಠಾಕುರರ ಮಗನೂ (ವಿಶ್ವಕವಿ ರವೀಂದ್ರನಾಥ ಠಾಕುರರ ತಂದೆಯೂ) ಆದ ಮಹರ್ಷಿ ದೇವೇಂದ್ರನಾಥ ಠಾಕುರರು (1817–1905).

ಬ್ರಾಹ್ಮಸಮಾಜಕ್ಕೆ ಇವರು ಸೇರಿದ್ದು 1843 ರಲ್ಲಿ; ಆ ವೇಳೆಗಾಗಲೆ ರಾಮಮೋಹನರಾಯರು ತೀರಿಕೊಂಡು ಐದು ವರ್ಷಗಳಾಗಿದ್ದುವು. ರಾಮಮೋಹನರಾಯರನ್ನು ಹತ್ತಿರದಿಂದ ಬಲ್ಲವರಾಗಿದ್ದು, ಅವರ ಮಾತುಕತೆಗಳನ್ನು ಕೇಳಿ, ಅವರ ಧೋರಣೆಯನ್ನು ಒಪ್ಪಿಕೊಂಡಿದ್ದರಾದರೂ ವಿಧ್ಯುಕ್ತವಾಗಿ ಬ್ರಾಹ್ಮಸಮಾಜವನ್ನು ಸೇರಿರಲಿಲ್ಲ.

ತಮ್ಮ ತಂದೆಯ ಜಮೀನುದಾರಿಕೆಯನ್ನು ನೋಡಿಕೊಳ್ಳುತ್ತಿದ್ದರು. ಒಮ್ಮೆ ಅವರು ತಮ್ಮ ಕೆಲಸದಮೇಲೆ ಎಂದಿನಂತೆ ತಮ್ಮ ಜಮೀನಿಗೆ ಹೋಗಿ ಅಲ್ಲಿ ಮಧ್ಯಾಹ್ನ ಬಯಲಲ್ಲಿ ಮರದ ಕೆಳಗೆ ವಿಶ್ರಮಿಸಿಕೊಳ್ಳುತ್ತಿದ್ದಾಗ ಗಾಳಿಗೆ ಯಾವುದೋ ಕಾಗದದ ಚೂರು ಅವರ ಹತ್ತಿರ ಹಾರಿಬಂದಿತ್ತು. ಕುತೂಹಲದಿಂದ

ಅವರು ಈ ಕಾಗದವನ್ನು ಕೈಗೆತ್ತಿಕೊಂಡು ನೋಡಿದರು. ಅದರಲ್ಲಿದ್ದ ಬರಹ 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್' ಎಂದು. ಈಶಾವಾಸ್ಯೋಪನಿಷತ್ತಿನ ಮೊದಲ ಮಂತ್ರದ ಮೊದಲ ಸಾಲು ಅದು; ಕಾಗದದ ಚೂರಿನಲ್ಲಿದ್ದದ್ದು ಅಷ್ಟೇ. ''ಇಲ್ಲಿ, ಈ ಜಗತ್ತಿನಲ್ಲಿ ಯಾವುಯಾವುದಿದೆಯೋ ಅವೆಲ್ಲದರಲ್ಲಿಯೂ ಈಶ್ವರನು ನೆಲೆಸಿದ್ದಾನೆ'' ಎಂಬರ್ಥ ಆ ಸಂಸ್ಕೃತ ವಾಕ್ಯದ್ದು.

ಈ ವಾಕ್ಯವನ್ನು ಮತ್ತೆ ಮತ್ತೆ ಓದಿದರು. ಅವರ ಒಡಲಲ್ಲಿ ಇದ್ದಕ್ಕಿದಂತೆ ಬೆಳಕು ಚೆಲ್ಲಿದಂತಾಯಿತು. ಭಗವಂತನ ಆದೇಶದಿಂದಲೇ ಈ ಕಾಗದ ತಮ್ಮಲ್ಲಿಗೆ ಬಂದಿತೆಂದು ಅವರಿಗೆ ಭಾಸವಾಯಿತು. ಅಂದಿನಿಂದ ಬ್ರಹ್ಮದ ಉಪಾಸನೆಯಲ್ಲಿ ತಮ್ಮ ಉಳಿದ ಬದುಕನ್ನು ಕಳೆಯಲು ನಿರ್ಧರಿಸಿದರು. ಈ ಪ್ರಸಂಗ ನಡೆದದ್ದು 1838ರಲ್ಲಿ. ಅಂದಿನಿಂದಲೇ ಅವರು ರಾಮಚಂದ್ರ ವಿದ್ಯಾವಾಗೀಶರೆಂಬ ದೊಡ್ಡ ಪಂಡಿತರ ಬಳಿ ಉಪನಿಷತ್ತುಗಳ ಅಧ್ಯಯನವನ್ನು ಆರಂಭಿಸಿದರು. ವಿದ್ಯಾವಾಗೀಶರು ರಾಮಮೋಹನರಾಯರ ಮತ್ತು ದ್ವಾರಕನಾಥ ಠಾಕುರರ ಮಿತ್ರರಾಗಿದ್ದವರು; ಆತ್ಮೀಯ ಸಭೆಯಲ್ಲೂ ಬ್ರಾಹ್ಮಸಮಾಜದಲ್ಲೂ ಧರ್ಮ ಪ್ರವಚನ ಮಾಡುತ್ತಿದ್ದವರು. ರಾಮಮೋಹನರಾಯರು ತೀರಿಕೊಂಡಮೇಲೆ ಬ್ರಾಹ್ಮಸಮಾಜವನ್ನು ನಡೆಸುತ್ತಿದ್ದವರು.

ಐದು ವರ್ಷಗಳ ಅಧ್ಯಯನ ನಡೆದಮೇಲೆ (1843ರಲ್ಲಿ) ದೇವೇಂದ್ರನಾಥ ಠಾಕುರರು ಇತರ ಇಪ್ಪತ್ತು ಜನರೊಂದಿಗೆ ಕಲ್ಕತ್ತಾ ಬ್ರಾಹ್ಮಸಮಾಜವನ್ನು ಸೇರಿ ಅದರ ಸದಸ್ಯರೂ ಸೇವಾವ್ರತಿಗಳೂ ಆದರು. ರಾಮಚಂದ್ರ ವಿದ್ಯಾವಾಗೀಶರೇ ಅವರಿಗೆ ಬ್ರಾಹ್ಮದೀಕ್ಷೆಯನ್ನು ಕೊಟ್ಟರು. ದೀಕ್ಷಾವಿಧಿಯು ಮಹಾನಿರ್ವಾಣ ತಂತ್ರದ ಪ್ರಕಾರ ನಡೆಯಿತು. ದೇವೇಂದ್ರನಾಥ ಠಾಕುರರ ಪ್ರವೃತ್ತಿಯು ಅಧ್ಯಾತ್ಮಪ್ರಮುಖವಾಗಿಯೇ ಇದ್ದು, ಅವಕಾಶ ದೊರೆತಾಗಲೆಲ್ಲ ತಪಸ್ಸಿನಲ್ಲಿ ತೊಡಗುತ್ತಿದ್ದರು. ಹೀಗಾಗಿ ಅವರು 'ಮಹರ್ಷಿ' ಯೆಂದೇ ಹೆಸರಾದರು.

ಬ್ರಾಹ್ಮಸಮಾಜವನ್ನು ಸೇರಿದ ಐದು ವರ್ಷಗಳಮೇಲೆ ಅವರು ಬ್ರಾಹ್ಮಸಮಾಜಕ್ಕೆ ಸಂವಿಧಾನವೊಂದನ್ನು ಸಿದ್ಧಪಡಿಸಿದರು. ಇದರ ಕೊರತೆ ಇದ್ದು, ಸಮಾಜದ ರೀತಿ-ನೀತಿಗಳಾಗಲಿ, ಗೊತ್ತು-ಗುರಿಗಳಾಗಲಿ, ಧೋರಣೆಯಾಗಲಿ, ಯಾರಿಗೂ ತಿಳಿದಿರಲಿಲ್ಲ. ರಾಮಮೋಹನರಾಯರ ಅಂತರಂಗವನ್ನೂ ಆಶಯ ವನ್ನೂ ಚೆನ್ನಾಗಿ ಅರಿತಿದ್ದ ದೇವೇಂದ್ರನಾಥರು ಈ ಕೆಲಸವನ್ನು ಕೈಗೊಂಡದ್ದು ಬ್ರಾಹ್ಮಸಮಾಜವು ಸುಸ್ಥಿರವಾಗಿ ನಿಲ್ಲಲು, ವಿಸ್ತೃತವಾಗಿ ಬೆಳೆಯಲು ನೆರವಾಯಿತು.

ಬ್ರಾಹ್ಮಸಮಾಜದ ನೆಲೆಯನ್ನೂ ನಿಲುವನ್ನೂ ಸ್ಪಷ್ಟಪಡಿಸಲು ಮಹರ್ಷಿ ದೇವೇಂದ್ರನಾಥರು ಬ್ರಾಹ್ಮಧರ್ಮವೆಂಬ ಗ್ರಂಥವನ್ನು ಸಿದ್ಧಪಡಿಸಿದರು (1848). ಆಗ ಮಹರ್ಷಿಗಳಿಗೆ ಮೂವತ್ತೊಂದು ವರ್ಷ ವಯಸ್ಸಷ್ಟೆ. ಈ ಗ್ರಂಥವು ಉಪನಿಷತ್ತಿನ ವಾಕ್ಯಗಳದ್ದೇ ಸಂಕಲನ; ವಾಕ್ಯಗಳಿಗೆ ಸಂದರ್ಭೋಚಿತವಾಗಿ, ಬ್ರಾಹ್ಮಧರ್ಮದ ವಿವರಗಳಿನುಕೂಲವಾಗಿ ಸಂಸ್ಕೃತದಲ್ಲಿ ಟೀಕೆ, ಬಂಗಾಳಿಯಲ್ಲಿ ಅನುವಾದ, ತಾತ್ಪರ್ಯಗಳು ಸೇರಿವೆ. ಬ್ರಾಹ್ಮಧರ್ಮಕ್ಕೊಂದು ಸೊಗಸಾದ, ಸಮಗ್ರವಾದ ಕೈಪಿಡಿಯೆನ್ನಬಹುದು; ಆಕರ ಗ್ರಂಥವೂ ಹೌದು.

ಉಪನಿಷದ್ವಾಕ್ಯಗಳನ್ನು ಯಥಾವತ್ತಾಗಿ (ಎಂದರೆ ಮೂಲದಲ್ಲಿರುವಂತೆಯೆ) ಕೊಟ್ಟಿರುವುದೆ ಬಹಳ. ಆದರೆ ಕೆಲವೊಮ್ಮೆ ಮೂಲದಲ್ಲಿ ಬೇರೆ ಬೇರೆ ಕಡೆ ಬಂದಿರುವ ವಾಕ್ಯಗಳನ್ನು ಅರ್ಥಕ್ಕೆ ಹೊಂದುವಂತೆ ಒಂದೆಡೆ ಸೇರಿಸಿದ್ದಾರೆ. ಮತ್ತೂ ಕೆಲವು ಸಂದರ್ಭಗಳನ್ನು ಉಪನಿಷತ್ತಿನ ಮಾತುಗಳನ್ನೆ ಬಳಸಿಕೊಂಡು ತಮ್ಮದೇ ವಾಕ್ಯಗಳನ್ನು ಹೆಣೆದಿದ್ದಾರೆ. ಮಂತ್ರಗಳು ಮಂತ್ರಾಂಶಗಳು ಎಂಬ ವಿಭಜನೆಯೂ ಇದೆ.

ದೇವೇಂದ್ರನಾಥರು ತಮ್ಮ ಆತ್ಮಕಥೆಯಲ್ಲಿ (ಆತ್ಮಜೀವನೀ) ಇದು ತಮ್ಮ ದುರ್ಬಲಬುದ್ಧಿಯಿಂದ ಸಿದ್ಧವಾದ ಗ್ರಂಥವಲ್ಲವೆಂದೂ, ಭಗವದಾದೇಶವು ತಮ್ಮ ಒಡಲಲ್ಲಿ ಸಿಡಿದೆದ್ದಾಗ ಈ ವಾಕ್ಯಗಳು ತಾವೇ ತಾವಾಗಿ ಹೊರಹೊಮ್ಮಿದುವೆಂದೂ ತಿಳಿಸಿದ್ದಾರೆ. ಇಡೀ ಗ್ರಂಥವು (ಪ್ರಥಮ ಖಂಡ, ಉಪನಿಷತ್ತು ಎಂಬ ಹೆಸರಿನದು) ಕೇವಲ ಮೂರೇ ಗಂಟೆಗಳಲ್ಲಿ ಮುಗಿಯಿತು. ಇವರು ಕಣ್ಣು ಮುಚ್ಚಿಕೊಂಡು ಪದ್ಮಾಸನದಲ್ಲಿ ಕೂತು ಹೇಳುತ್ತ ಹೋದಂತೆ ಇವರ ಮಿತ್ರರು ಅಕ್ಷಯಕುಮಾರದತ್ತ ಎಂಬುವರು ಬರೆದುಕೊಳ್ಳುತ್ತಿದ್ದರು. ದೇವೇಂದ್ರನಾಥರಿಗೆ ಯಾವ ಶ್ರಮವೂ ಆಗಲಿಲ್ಲವಂತೆ. ಆದರೆ ಈ ಗ್ರಂಥ ಮುಗಿದಮೇಲೆ "ಈ ಮಾತುಗಳನ್ನು ಅರ್ಥಮಾಡಿಕೊಳ್ಳಲು ನಾನು ಇಡೀ ಜೀವಮಾನವನ್ನೇ ಕಳೆಯಬೇಕಾದೀತು; ಆದರೂ ಅದರ ತಾತ್ಪರ್ಯ ಮನದಟ್ಟಾಯಿತು ಎಂದು ಹೇಳಲಾಗುವುದೋ ಇಲ್ಲವೋ !" ಎಂದು ದೇವೇಂದ್ರನಾಥರೇ ಹೇಳುತ್ತಾರೆ.

ಹೀಗೆ ಹೊರಬಂದ ಗ್ರಂಥದ ಆರಂಭ 1848ರಲ್ಲಾದರೂ ಅದಕ್ಕೆಲ್ಲ ಮಹರ್ಷಿಗಳು ಬಂಗಾಳಿಯಲ್ಲಿ ಸೂಕ್ತವಾದ ವಿವರಣೆಗಳನ್ನು ಬರೆದು ಅಚ್ಚಿಗೆ ಸಿದ್ಧಪಡಿಸಿದ್ದು 1861ರಲ್ಲೇ, ತಮ್ಮ ನಲವತ್ತುನಾಲ್ಕನೆಯ ವಯಸ್ಸಿನಲ್ಲಿ. ಹೀಗೆ ಗ್ರಂಥದ ನಿರ್ಮಾಣಕ್ಕೆ ಹದಿಮೂರು ವರ್ಷಗಳು ಹಿಡಿದುವು. ಗ್ರಂಥ ಆರಂಭವಾಗುವ ಕಾಲಕ್ಕೆ ಮೊದಲೂ ಅವರು ಹನ್ನೊಂದು ವರ್ಷಗಳನ್ನು

ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ಕಳೆದರು. ಗ್ರಂಥ ರಚನೆಯ ಮೂಲಕಾರ್ಯ ಮುಗಿದಮೇಲೆ ಅವರು 1857ರಿಂದ ಒಂದು ವರ್ಷ ಹಿಮಾಲಯಕ್ಕೆ ಹೋಗಿ ಅಲ್ಲಿ ತಪಸ್ಸಿನಲ್ಲಿ ತೊಡಗಿದ್ದರು. ಇಷ್ಟು ದೀರ್ಘಕಾಲದ ಪರಿಶ್ರಮ, ಶ್ರದ್ಧೆ, ನಿಷ್ಠೆಗಳಿಂದ ಈ ಗ್ರಂಥವನ್ನು ಸಿದ್ಧಪಡಿಸಿದರಾದರೂ ಮುದ್ರಣವಾದ ಗ್ರಂಥದಲ್ಲಿ ತಮ್ಮ ಹೆಸರನ್ನು ಎಲ್ಲಿಯೂ ಪ್ರಕಟಪಡಿಸಲಿಲ್ಲ. ತಮ್ಮನ್ನು ತಾವು ರಚನೆ ಮಾಡಿದವರೆಂದಾಗಲಿ, ಸಂಕಲನಮಾಡಿದವರೆಂದಾಗಲಿ, ಸಂಪಾದಕರೆಂದಾಗಲಿ, ಗ್ರಂಥದಲ್ಲಿ ಕಾಣಿಸಲಿಲ್ಲ.

ಇದಕ್ಕೆ ಕಾರಣ ಈ ಗ್ರಂಥರಚನೆಗೆ ಪ್ರೇರಣೆಯು ಪರಮೇಶ್ವರನದ್ದೇ, ಅದರ ಹಿನ್ನೆಲೆಯಲ್ಲಿನ ಅನುಭವಗಳೂ ಅವನ ಅನುಗ್ರಹವೇ ಎಂಬ ದೃಢವಾದ ನಂಬಿಕೆ. ತಾವೊಂದು ನಿಮಿತ್ತಮಾತ್ರ ಎಂದು ಬಗೆದಿದ್ದರಾಗಿ ತಮ್ಮ ಹೆಸರನ್ನು ಗ್ರಂಥ ದೊಂದಿಗೆ ಸೇರಿಸಲು ಅವರ ಮನಸ್ಸು ಒಡಂಬಡಲಿಲ್ಲ. ಮುಂದೆಂದೂ ಕೂಡ ತಾವು ಈ ಗ್ರಂಥವನ್ನು ಸಿದ್ಧಪಡಿಸಿದೆನೆಂದು ಎಲ್ಲಿಯೂ ಯಾರೊಡನೆಯೂ ಹೇಳಲಿಲ್ಲ.

ಈ ಸಂದರ್ಭದಲ್ಲಿ ಅವರ ಮಾತುಗಳು ಹೀಗಿವೆ—''ಬ್ರಾಹ್ಮಧರ್ಮೇರ ಶಾಶ್ವತ ಸತ್ಯಸಕಲ ಈಶ್ವರ ಕರುಣಾಕರಿಯಾ ಆಮಾರ ಹೃದಯೇ ಉಚ್ಛ್ವಸಿತ ಕರಿಯಾಛೆನ್, ಓ ತಾಹಾಇ ಏ ಗ್ರಂಥ ಧೃತ ಹಇಯಾಛೆ'' (ಆತ್ಮಜೀವನೀ, ಪುಟ 176). ಈಶ್ವರನು ತನ್ನಲ್ಲಿ ದಯೆ ತೋರಿ ತನ್ನ ಒಡಲಲ್ಲಿ ಬ್ರಾಹ್ಮಧರ್ಮವನ್ನು ಮೇಲೆಬ್ಬಿಸಿದನೆಂದೂ, ಹಾಗೆ ಈ ಗ್ರಂಥ ತೋರಿಕೊಂಡಿತೆಂದೂ ಈ ಮಾತುಗಳ ತಾತ್ಪರ್ಯ.

ಅವರು ತಮ್ಮ ಆತ್ಮಜೀವನಿಯಲ್ಲೇ ಗ್ರಂಥ ಹೊರಬಂದುದನ್ನು ಕುರಿತು ಮತ್ತೆ ಕೆಲವು ಮಾತುಗಳನ್ನಾಡಿದ್ದಾರೆ—''ಕೇ ಆಮಾರ ಹೃದಯೇ ಏಈ ಸತ್ಯಸಕಲ ಪ್ರೇರಣ ಕರಿಲೇನ್?'ಧಿಯೋ ಯೋ ನಃ ಪ್ರಚೋದಯತ್'. . . ಸೇ ಇ ಜಾಗ್ರತ್ ಜೀವಂತ ದೇವತಾಇ ಆಮಾರ ಹೃದಯೇ ಏಇ ಸಕಲಸತ್ಯ ಪ್ರೇರಣ ಕರಿಲೇನ್. ಇಹಾ ಆಮಾರ ದುರ್ಬಲ ಬುದ್ಧಿರ ಸಿದ್ಧಾಂತ ನಹೇ, ಇಹಾ ಮೋಹವಾಕ್ಯಓ ನಹೇ, ಪ್ರಲಾಪವಾಕ್ಯ ನಹೇ. ಇಹಾ ಆಮಾರ ಹೃದಯೇ ಉಚ್ಛ್ವಸಿತ ತಾಂಹಾರ ಇ ಪ್ರೇರಿತ ಸತ್ಯ'' (ಪು 179). ಅವರ ಒಡಲಲ್ಲಿ ಪ್ರೇರಣೆಯಾದರೂ ಬಂದದ್ದು ಸಕಲ ಸತ್ಯಸ್ವರೂಪನಾದ, ಜಾಗ್ರತ-ಜೀವಂತ ದೇವತೆಯು (ಎಂದರೆ ಪರಮೇಶ್ವರನು) ದಯಮಾಡಿದ್ದರಿಂದಲೇ ಎಂದು ಅವರ ವಿಶ್ವಾಸ. ಹೀಗಾದುದರಿಂದ ಈ ಗ್ರಂಥವನ್ನು ತಮ್ಮ ದುರ್ಬಲವಾದ ಬುದ್ಧಿಯ ಸಿದ್ಧಾಂತವೆಂದಾಗಲಿ, ಯಾವುದೋ

ಮೋಹಕ್ಕೆ ಒಳಗಾಗಿ ಆಡಿದ ಮಾತುಗಳೆಂದಾಗಲಿ ಅಥವಾ ಉನ್ಮತ್ತನ ಪ್ರಲಾಪವೆಂದಾಗಲಿ ಬಗೆಯುವಂತಿಲ್ಲ, ತಮ್ಮ ಒಡಲಲ್ಲಿ ಉಸಿರಾಟದಂತೆ ಮೇಲೆದ್ದು ಬಂದದ್ದು ಇದು ಪರಮೇಶ್ವರನಿಂದ ಪ್ರೇರಿತವಾದ ಸತ್ಯವೇ ಎಂದು ಹೇಳಿಕೊಂಡಿದ್ದಾರೆ.

ಹೀಗಾಗಿ ಈ ಗ್ರಂಥದ ಹತ್ತು ಸಂಸ್ಕರಣಗಳು ಮುದ್ರಿತವಾಗಿ ಪ್ರಕಟವಾಗಿದ್ದರೂ ಯಾವುದರಲ್ಲೂ ಅವರ ಹೆಸರನ್ನು ಸೇರಿಸದೆ, ಅವರ ಆಶಯಕ್ಕೆ ಮನ್ನಣೆ ನೀಡಲಾಗಿದೆ. ಬ್ರಾಹ್ಮಧರ್ಮವೆಂಬ ಗ್ರಂಥದಲ್ಲಿ ಎರಡು ಖಂಡಗಳು. ಮೊದಲನೆಯದು 'ಉಪನಿಷತ್' (ಬ್ರಾಹ್ಮೀ ಉಪನಿಷತ್), ಎರಡನೆಯದು 'ಅನುಶಾಸನ'. ಒಂವೊಂದರಲ್ಲೂ ಹದಿನಾರು ಅಧ್ಯಾಯಗಳು. ಒಂದೊಂದು ಖಂಡ ಮುಗಿದಮೇಲೆ ಒಂದು ಶಾಂತಿಪಾಠ, ಮೊದಲ ಖಂಡದಲ್ಲಿ ಕೇವಲ ಉಪನಿಷತ್ತುಗಳ ವಾಕ್ಯಗಳು (ಮಂತ್ರಗಳು, ಮಂತ್ರಾಂಶಗಳು) ಸೇರಿವೆ. ಎರಡನೆಯ ಖಂಡದಲ್ಲಿ ಬಹುಮಟ್ಟಿಗೆ ಮಹಾಭಾರತದ ಶ್ಲೋಕಗಳು; ಉಳಿದಂತೆ ಮಹಾನಿರ್ವಾಣತಂತ್ರ, ಮನುಸಂಹಿತೆ, ವ್ಯಾಸಸಂಹಿತೆ, ಅತ್ರಿಸಂಹಿತೆ, ಸಂವರ್ತ ಸಂಹಿತೆಗಳಿಂದ ಆಯ್ದುಕೊಂಡ ಶ್ಲೋಕಗಳು.

ಇವೆರಡು ಖಂಡಗಳು ಬ್ರಾಹ್ಮಧರ್ಮವೆನಿಸಿಕೊಂಡರೆ, ಇವಕ್ಕೆ ಮೊದಲಲ್ಲೆ 'ಬ್ರಹ್ಮೋಪಾಸನೆ 'ಯೆಂಬ ಭಾಗ ಬಂದಿದೆ. ಬ್ರಾಹ್ಮಸಮಾಜದ ಸ್ವರೂಪ, ಸ್ವಭಾವ, ಉದ್ದೇಶ, ಧೋರಣೆಗಳನ್ನು ತಿಳಿಸುವ ಭಾಗ ಇದು. ಬ್ರಾಹ್ಮಸಮಾಜದ ಸದಸ್ಯರಿಗೂ ಬ್ರಾಹ್ಮಧರ್ಮದ ಅಭಿಮಾನಿಗಳಿಗೂ ಅಗತ್ಯವಾದದ್ದು. ಇಲ್ಲಿಯೂ ಉಪನಿಷತ್ತಿನ ಮಂತ್ರಗಳದ್ದೇ ಸಿಂಹಪಾಲು. ಬ್ರಹ್ಮೋಪಾಸನೆಯಲ್ಲಿ ಮುಂಜಾನೆ ನೆನೆಯಬೇಕಾದ ವಿಚಾರಗಳನ್ನು ಕುರಿತಂತೆ 'ಪ್ರಾತಃಸ್ಮರ್ತವ್ಯಂ', ಬ್ರಾಹ್ಮ ಧರ್ಮದ ಮೂಲನೆಲೆಯನ್ನು ತಿಳಿಯ ಹೇಳುವ 'ಬ್ರಾಹ್ಮಧರ್ಮಬೀಜಂ' (ಮೊದಲ ಹೆಸರು 'ಧರ್ಮ ಬೀಜಂ') ಬ್ರಾಹ್ಮಧರ್ಮವನ್ನು ಸ್ವೀಕರಿಸುವವರು ಅನುಸಂಧಾನಮಾಡಬೇಕಾದ 'ಬ್ರಾಹ್ಮಧರ್ಮಗ್ರಹಣಂ' (ಮೊದಲ ಹೆಸರು 'ಬ್ರಾಹ್ಮಗ್ರಹಣಂ'), ಇದೇ ವಿವರಗಳನ್ನು ಶ್ಲೋಕರೂಪವಾಗಿ ಕೊಟ್ಟಿರುವ 'ಪ್ರತಿಜ್ಞಾಸ್ಮರಣಾರ್ಥಶ್ಲೋಕಾಃ' ಎಂಬ ಪರಿಚ್ಛೇದಗಳು ಬ್ರಹ್ಮೋಪಾಸನೆಗೆ ಮೊದಲಲ್ಲಿ ಬರುತ್ತವೆ.

ಬ್ರಹ್ಮೋಪಾಸನೆಯೆಂಬ ಮುಖ್ಯ ಭಾಗದಲ್ಲಿ 'ಅರ್ಚನಾ', 'ಪ್ರಣಾಮಃ', 'ಸಮಾಧಾನಂ', 'ಧ್ಯಾನಂ' (ಮೊದಲ ಹೆಸರು ಗಾಯತ್ರೀ), 'ಸ್ತೋತ್ರಂ',

'ಪ್ರಾರ್ಥನಾ', 'ಸ್ವಾಧ್ಯಾಯಃ' (ಮೊದಲ ಹೆಸರು 'ಪಾಠ್ಯಶ್ರುತಿಃ' ಮತ್ತು 'ಉಪಸಂಹಾರಃ') ಎಂದು ಎಂಟು ವಿಭಾಗಗಳಿವೆ. ಇಲ್ಲಿನ ಮಂತ್ರಗಳೆಲ್ಲ ಉಪನಿಷತ್ತಿನವು; 'ಸ್ತೋತ್ರಂ' ಎಂಬ ವಿಭಾಗದಲ್ಲಿ ಬಂದಿರುವ ಶ್ಲೋಕಗಳು ಮಹಾನಿರ್ವಾಣ ತಂತ್ರದಿಂದ ಆಯ್ದುಕೊಂಡವು.

ಈ ಗ್ರಂಥದಲ್ಲಿ ಎಲ್ಲ ಪರಿಚ್ಛೇದಗಳ ಹೆಸರುಗಳೂ ಒಕ್ಕಣೆಯೂ ಸಂಸ್ಕೃತದಲ್ಲೇ ಇವೆ. ಮಂತ್ರಗಳಿಗೆ ಬಂಗಾಳಿಯಲ್ಲಿ ಅನುವಾದ ಮತ್ತು ಟೀಕೆಗಳಿವೆ; ತಾತ್ಪರ್ಯವನ್ನೂ ಕಾಣಿಸಿದ್ದಾರೆ. ಪ್ರಕೃತ ಪ್ರಕಟಣೆಯಲ್ಲಿ ಈ ಗ್ರಂಥವನ್ನುಮಾತ್ರ ಎತ್ತಿಕೊಳ್ಳಲಾಗಿದೆ. ಸಂಸ್ಕೃತ ಮೂಲದ ಮಂತ್ರಗಳನ್ನು ಕನ್ನಡಲಿಪಿಯಲ್ಲೂ, ಬಂಗಾಳಿ ಅನುವಾದ ಮತ್ತು ಟೀಕೆಗಳನ್ನು ಕನ್ನಡದಲ್ಲೂ ಅನುವಾದಮಾಡಿ ಕೊಡಲಾಗಿದೆ. ಜೊತೆಗೆ ಸೇರಿಸಿರುವ ವಿವರಣೆಗಳು ಮಾತ್ರ ನನ್ನವು.

'ಬ್ರಾಹ್ಮಧರ್ಮ' ವೆಂಬ ಗ್ರಂಥವನ್ನು ಬಂಗಾಳಿಯಲ್ಲಿ ನಾನು ಮೊಟ್ಟಮೊದಲು ಮೂವತ್ತು-ನಲವತ್ತು ವರ್ಷಗಳಷ್ಟು ಹಿಂದೆ ಓದಿದಾಗ, ನನ್ನ ಮನಸ್ಸಿನಮೇಲೆ ಅದು ಬಲವಾದ ಮುದ್ರೆಯನ್ನೊತ್ತಿತು. ಅದನ್ನು ಹಲವಾರು ಬಾರಿ ಅಧ್ಯಯನ ಮಾಡಿ ಅದರಿಂದ ಬಹಳ ಪ್ರಯೋಜನವನ್ನು ಪಡೆದುಕೊಂಡಿದ್ದೇನೆ. ನನಗೆ ತುಂಬ ಪ್ರಿಯವಾದ ಗ್ರಂಥ ಇದು. ಇದನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂಬ ಬಯಕೆ ಬಹುಕಾಲದಿಂದ ಇದ್ದಿತು. ನನ್ನ ಮಿತ್ರರಾದ ವೂಡೇ ಸಂಸ್ಥೆಯ ಶ್ರೀ ಡಬ್ಲ್ಯೂ. ಎಚ್. ಪುಟ್ಟಯ್ಯನವರೂ ಅವರ ಮಗ ಶ್ರೀ ಡಬ್ಲ್ಯೂ. ಪಿ. ಕೃಷ್ಣ ಅವರೂ (ಬೆಂಗಳೂರಿನ ಬ್ರಾಹ್ಮಸಮಾಜದ ಕಾರ್ಯ ಕರ್ತರು) ಈಗ ಈ ಕೆಲಸದಲ್ಲಿ ನನ್ನನ್ನು ತೊಡಗಿಸಿದ್ದಾರೆ. ಈ ಉಪಕಾರಕ್ಕಾಗಿ ಅವರಿಗೆ ನನ್ನ ಕೃತಜ್ಞತೆ ಸಲ್ಲಬೇಕು. ಅವರೊಂದಿಗೆ ಅವರ ಮತ್ತು ನನ್ನ ಮಿತ್ರರಾದ ಶ್ರೀ ಬಿ. ಪಿ. ಚಂದ್ರಶೇಖರ್ ಅವರ ನೆರವನ್ನೂ ನಾನು ನೆನೆಯಬೇಕು.

'ಬ್ರಾಹ್ಮಧರ್ಮ'ದ ಕನ್ನಡರೂಪ ಪ್ರಕಟವಾಗುವ ಮೊದಲೇ 'ಬ್ರಹ್ಮೋಪಾಸನೆ' ಎಂಬ ಉಪೋದ್ಘಾತ ಭಾಗವನ್ನು ಸ್ವತಂತ್ರಪ್ರಕರಣವಾಗಿ ಪ್ರಕಟ ಮಾಡಲು ಪ್ರಕಾಶಕರು ಒಪ್ಪಿದ್ದಾರೆ, ಇದು ಬ್ರಾಹ್ಮಸಮಾಜದ ಸದಸ್ಯರಿಗೆ ಮುಖ್ಯವಾದ ಭಾಗವಾದುದರಿಂದ.

ಸಾ. ಕೃ. ರಾಮಚಂದ್ರ ರಾವ್

ಪರಿವಿಡಿ

ಪುಟ

೧. ಪ್ರಾತಃ ಸ್ಮರ್ತವ್ಯಂ ೧

೨. ಬ್ರಾಹ್ಮಧರ್ಮಬೀಜಂ (ಧರ್ಮಬೀಜಂ) ೪

೩. ಬ್ರಾಹ್ಮಧರ್ಮಗ್ರಹಣಂ (ಬ್ರಾಹ್ಮಪ್ರತಿಜ್ಞಾ) ೮

೪. ಪ್ರತಿಜ್ಞಾಸ್ಮರಣಾರ್ಥಶ್ಲೋಕಾಃ ೧೩

೫. ಬ್ರಹ್ಮೋಪಾಸನಾ (ಸಂಕ್ಷೇಪ ಬ್ರಹ್ಮೋಪಾಸನಾಪ್ರಕರಣಂ) ೧೫

ಅರ್ಚನಾ

ಪ್ರಣಾಮಃ

ಸಮಾಧಾನಂ

ಧ್ಯಾನಂ (ಗಾಯತ್ರೀ)

ಸ್ತೋತ್ರಂ

ಪ್ರಾರ್ಥನಾ

ಸ್ವಾಧ್ಯಾಯಃ (ಪಾಠ್ಯಶ್ರುತಿಃ)

ಉಪಸಂಹಾರಃ

೬. ಶಾಂತಿಪಾಠ ೩೬

೭. ಅನುಬಂಧ ೩೮

ಮಹರ್ಷಿ ದೇವೇಂದ್ರನಾಥ ಠಾಕುರರು

(೧)

ಪ್ರಾತಃ ಸ್ಮರ್ತವ್ಯಂ

ಲೋಕೇಶ ಚೈತನ್ಯಮಯಾಧಿದೇವ,
ಮಂಗಲ್ಯ ವಿಷ್ಣೋ ಭವದಾಜ್ಞಯೈವ ।
ಹಿತಾಯ ಲೋಕಸ್ಯ, ತವ ಪ್ರಿಯಾರ್ಥಂ
ಸಂಸಾರಯಾತ್ರಾಮನುವರ್ತಯಿಷ್ಯೇ ॥

ಮುಂಜಾನೆ ನೆನೆಯತಕ್ಕದ್ದು

ಹೇ ಲೋಕನಾಥನೇ, ಚೈತನ್ಯಮಯನಾದ ಅಧಿದೇವನೇ, ಮಂಗಳಮಯನೂ ಸರ್ವವ್ಯಾಪಿಯೂ ಆದ ವಿಭುವೇ, ನಿನ್ನ ಆಜ್ಞಾನುಸಾರವಾಗಿಯೇ ಲೋಕದ ಹಿತಕ್ಕಾಗಿ ನಿನ್ನನ್ನು ಪ್ರೀತಿಪಡಿಸಲೆಂದು ಸಂಸಾರವೆಂಬ ಈ ಯಾತ್ರೆಯಲ್ಲಿ ತೊಡಗಿದ್ದೇನೆ.

ವಿವರಣೆ

ದಿನವೂ ನಿದ್ದೆಯಿಂದ ಎದ್ದೊಡನೆ ನಮ್ಮ ಇರವಿಗೂ ಅರಿವಿಗೂ ಕಾರಣನಾದ ಭಗವಂತನನ್ನು ನೆನೆಯಬೇಕಾದದ್ದು ನಮ್ಮ ಕರ್ತವ್ಯ. ಅವನು ಇಡೀ ಲೋಕದ ಒಬ್ಬನೇ ಒಡೆಯ. ಲೋಕ ಇರುವುದು, ಲೋಕದ ವ್ಯವಹಾರ ನಡೆಯುವುದು ಎಲ್ಲಕ್ಕೂ ಅವನ ಚೈತನ್ಯವೇ ಆಸರೆ. ಅವನು ಚೈತನ್ಯಮಯ. ಬೆಳಗುತ್ತ ಬದುಕಿಗೆ ನೆರವಾಗುವ ಎಲ್ಲ ವಿವರಗಳೂ ದೇವತೆಗಳೇ. ದೇವ ಎನ್ನುವ ಮಾತಿಗೆ ತಾನೆ ಬೆಳಗುವುದು, ಉಳಿದೆಲ್ಲವನ್ನೂ ಬೆಳಗಿಸುವುದು (ದೀಪನ, ದ್ಯೋತನ) ಎಂದರ್ಥ. ಎಂದರೆ ಚೇತನಗಳೆಲ್ಲ ದೇವತೆಗಳೇ. ಚೈತನ್ಯವೆಲ್ಲಕ್ಕೂ ಆಸರೆಯಾದ ಅವನು ಅಧಿದೇವ.

ಮಂಗಳವನ್ನುಂಟುಮಾಡುವವನು ಇವನೇ. ಮನುಷ್ಯನಿಗೆ ಸುಖ, ಹಿತ ಎಂಬ ಎರಡು ಗುರಿಗಳಿರುತ್ತವೆ. ಸುಖವೆಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ತಣಿಸುವುದು; ವಿಷಯಗಳನ್ನು ಪಡೆದುಕೊಳ್ಳುವುದು. ಅವುಗಳ ಅನುಭವ ಸುಖಕ್ಕೆ ಸಾಧನ. ಅನುಕೂಲವೆನಿಸುವ ವಿಷಯದೊಂದಿಗೆ ನಂಟು ಇರುವಷ್ಟು

ಕಾಲ ಸುಖ; ನಂಟು ತೀರಿದರೆ ದುಃಖವೇ. ಪ್ರತಿಕೂಲವಾದ ವಿಷಯದೊಂದಿಗೆ ನಂಟು ಮೂಡಿಕೊಂಡರೂ ಸುಖವಿರದು. ಸುಖವೆಂಬುದು ನಿತ್ಯವಲ್ಲ, ದುಃಖದೊಂದಿಗೆ ಕೂಡಿಕೊಂಡೇ ಇರುತ್ತದೆ. ಆದ್ದರಿಂದ ಸುಖವನ್ನೆ ಬಯಸಿದವರು ಕಡೆಗೆ ನಿರಾಶರಾಗುವುದು ತಪ್ಪಿದ್ದಲ್ಲ. ಹಿತವೆಂದರೆ ಒಳಿತು; ಮನುಷ್ಯನ ಉದ್ಧಾರವಾಗುವುದು ಹಿತ. ಇದು ನಿತ್ಯವಾದದ್ದು; ಇದರಲ್ಲಿ ಸುಖ-ದುಃಖಗಳ ಎಣಿಕೆಯಿರದು. ಆದ್ದರಿಂದ ನಮ್ಮಲ್ಲಿ ಮನುಷ್ಯನು ಸಾಧಿಸಿಕೊಳ್ಳಬೇಕಾದದ್ದು ಸುಖವನ್ನಲ್ಲ, ಹಿತವನ್ನು ಎಂದಿದ್ದಾರೆ.

ಉಪನಿಷತ್ತಿನಲ್ಲಿ ಸುಖವನ್ನು ಪ್ರೇಯಸ್ಸೆಂದೂ ಹಿತವನ್ನು ಶ್ರೇಯಸ್ಸೆಂದೂ ಕರೆದಿದ್ದಾರೆ. ಪ್ರೇಯಸ್ಸಿನಲ್ಲಿ ಬಹಿಃಪ್ರವೃತ್ತಿ, ವಿಷಯಕಾಮನೆ. ಶ್ರೇಯಸ್ಸಿನಲ್ಲಿ ಅಂತಃಪ್ರವೃತ್ತಿ, ಆತ್ಮಕಾಮನೆ. ತನ್ನ ಹೃದಯದೊಳಗಿರುವ ಆಕಾಶದಲ್ಲೆ ಭಗವಂತನಿದ್ದಾನೆ. ಹೊರಗಿನ ಆಕಾಶವಿದ್ದಂತೆ ಒಳಗೂ ಆಕಾಶವಿದೆ. ಆಕಾಶ ಎನ್ನುವ ಮಾತಿಗೆ ಎತ್ತೆತ್ತಲೂ ಬೆಳಗುವುದು, ಎಲ್ಲವನ್ನೂ ಬೆಳಗಿಸುವುದು (ಆ ಸಮಂತಾತ್ ಕಾಶತಿ ಪ್ರಕಾಶಯತಿ) ಎಂದರ್ಥ. ಹೃದಯವೆಂದರೆ ಬದುಕಿನ ಕೇಂದ್ರಸ್ಥಾನ; ಬದುಕಿನ ಎಲ್ಲ ವಿವರಗಳನ್ನೂ ತನ್ನಲ್ಲಿ ಸೆಳೆದು ಕೊಳ್ಳುತ್ತಿರುವುದರಿಂದಲೆ ಹೃದಯವೆಂಬ ಮಾತು (ಹೃ ಎಂಬ ಧಾತುವಿನಿಂದ). ಈ ಕೇಂದ್ರಸ್ಥಾನದಲ್ಲಿ ಬೆಳಗುತ್ತಿರುವ ಬಯಲಿದೆ. ಇದನ್ನು ಹಾರ್ದಾಕಾಶ, ದಹರಾಕಾಶ ಎಂದು ಕರೆಯುತ್ತಾರೆ. ಇದರಲ್ಲಿ ಭಗವಂತ ಅಂತರ್ಯಾಮಿ ಯಾಗಿದ್ದುಕೊಂಡು, ಜೀವರ ಎಲ್ಲ ಕೆಲಸಗಳನ್ನೂ ನಡೆಸುತ್ತಾನೆ. ಇದನ್ನು ಅರಿತುಕೊಳ್ಳುವುದೇ ಹಿತ; ಇದೇ ಅಂತಃಪ್ರಾವಣ್ಯದ ಫಲ. ಇದು ಜೀವನಿಗೆ ಮಂಗಳವನ್ನುಂಟುಮಾಡುತ್ತದೆ.

ವಿಷ್ಣುವೆಂದರೆ ಎಲ್ಲೆಲ್ಲೂ ಹರಡಿಕೊಂಡಿರುವವನು (ವ್ಯಾಪನಶೀಲ); ಎಲ್ಲದರಲ್ಲಿಯೂ ಚೈತನ್ಯಮಯನಾದ ಮಂಗಳಮಯನಾದ ಪರಬ್ರಹ್ಮ ಅಡಗಿದ್ದಾನೆ. ಅವನನ್ನು ತೊರೆದು ಬೇರೇನೂ ಇರಲಾರದು.

ನಮ್ಮ ಸಂಸಾರವೆಂಬುದೊಂದು ಯಾತ್ರೆ. ಹುಟ್ಟು-ಸಾವುಗಳಿಂದ ಕೂಡಿದ್ದು, ಸುಖ-ದುಃಖಗಳೆಂಬ ಅನುಭವಗಳಿಂದ ಹಿಗ್ಗಿಸುವುದು ಕುಗ್ಗಿಸುವುದು, ಅವಿದ್ಯೆ-ಕಾಮ-ಕರ್ಮಗಳ ನೆಲೆಯಾದುದು ಸಂಸಾರ (ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಸಾಗುವುದು). ಬ್ರಹ್ಮನಿಂದಲೆ ಹೊರಹೊಮ್ಮಿ ಬ್ರಹ್ಮದೆಡೆಗೇ ಹೋಗುವುದು ಈ ಸಂಸಾರಯಾತ್ರೆ. ಯಾತ್ರೆ ಮಾಡುವಾಗ ಹಲವು ಊರುಗಳನ್ನು ದಾಟಬೇಕಾದಂತೆ ಇಲ್ಲಿಯೂ ಹಲವು ಜನ್ಮಗಳು, ಅವಸ್ಥೆಗಳು, ಅನುಭವಗಳು.

ನಮ್ಮ ಇಚ್ಛೆಯಂತೆ ನಾವು ಈ ಯಾತ್ರೆಗೆ ತೊಡಗಿಲ್ಲ. ಭಗವಂತನ ಆಜ್ಞೆಯಿಂದಲೇ ಈ ಯಾತ್ರೆ. ಜೀವಕ್ಕೆ ತನ್ನ ಸ್ವರೂಪದ ಅರಿವಾಗಬೇಕು, ತನ್ನ ಅಂತರ್ಯಾಮಿಯಾದ ಭಗವಂತನ ಅರಿವಾಗಬೇಕು, ಎಂಬುದೇ ಯಾತ್ರೆಯ ಉದ್ದೇಶ.

ಆದರೆ ಯಾತ್ರೆಯಲ್ಲಿ ತೊಡಗಿರುವಾಗ ಸುಖದ ಕಡೆ ಕಣ್ಣಿರದೆ ಹಿತದ ಕಡೆ ದೃಷ್ಟಿಯಿರಬೇಕು. ಸುಖವನ್ನೇ ಬಯಸುತ್ತಿದ್ದರೆ ತನಗೂ ಕೆಡಕು, ಬೇರೆಯವರಿಗೂ ತೊಂದರೆ. ಹಿತವನ್ನು ಬಯಸುವಾಗ ತನಗೂ ಒಳಿತು, ಇತರರಿಗೂ ಅದರಿಂದ ಲಾಭವೇ. ಲೋಕದ ಹಿತಕ್ಕಾಗಿ ಬಾಳಬೇಕೆಂಬುದು ನಮ್ಮ ಶಾಸ್ತ್ರದಲ್ಲಿ ಮುಖ್ಯವಾದ ಮಾತು. ಭಗವದ್ಗೀತೆ ಅದನ್ನು ಲೋಕಸಂಗ್ರಹವೆಂದು ಕರೆದಿದೆ. ಜನರನ್ನು ಒಳಿತಿನತ್ತ ನಡೆಸುವುದು, ಅವರು ಕೆಡದಂತೆ ಮಾಡುವುದು ಒಳ್ಳೆಯ ಜನರ ಕರ್ತವ್ಯ. ಬರಿಯ ಉಪದೇಶದಿಂದಲ್ಲ, ತಾನೇ ಒಳ್ಳೆಯವನಾಗಿ ನಡೆದು ದಾರಿ ತೋರಿಸುವುದರಿಂದ. ಸಮಾಜದಲ್ಲಿ ಹಿರಿಯರು ನಡೆದಂತೆ ಕಿರಿಯರೂ ನಡೆಯುತ್ತಾರೆ; ಹಿರಿಯರು ಸರಿಯಾಗಿ ನಡೆದುಕೊಳ್ಳಬೇಕಾದುದು ಅವರ ಕರ್ತವ್ಯ.

ಹೀಗೆ ಮಾಡಿದರೆ, ಎಂದರೆ ಲೋಕದ ಹಿತವನ್ನು ಸಾಧಿಸಿದರೆ, ಪರಮಾತ್ಮನಿಗೂ ಅದರಿಂದ ಪ್ರೀತಿಯೆ. ಈ ಯಾತ್ರೆಯಲ್ಲಿ ನಮ್ಮನ್ನು ತೊಡಗಿಸಿರುವುದು ಅವನೇ; ಅವನನ್ನು ಪ್ರೀತಿಬಡಿಸುವುದು ನಮ್ಮ ಗುರಿಯಾಗಿರಬೇಕು. ಯಾತ್ರೆಯ ನಿರ್ವಾಹಕ ದಿಟವಾಗಿ ಅವನೇ. ಅವನು ಒಲಿದರೇ ನಮಗೆ ಒಳಿತು.

ಸಂಸಾರವು ಹೇಯವೆಂದಾಗಲಿ ಅದನ್ನು ತೊರೆಯಬೇಕೆಂದಾಗಲಿ ಯಾವ ಶಾಸ್ತ್ರವೂ ಹೇಳುವುದಿಲ್ಲ. 'ಸಂಸಾರವೆಂಬಂಥ ಭಾಗ್ಯವಿರಲಿ' ಎಂದು ಪುರಂದರದಾಸರೇ ಹೇಳಿದರಲ್ಲವೆ? ಆದರೆ ಸಂಸಾರಕ್ಕೆ ಸ್ವಾರಸ್ಯ ಬರುವುದು, ಸಾರ್ಥಕತೆ ಬಂದೊದಗುವುದು 'ಕಂಸಾರಿ ನೆನೆವೆಂಬ ಸೌಭಾಗ್ಯ' ವಿದ್ದಾಗಲೇ. ನಮ್ಮ ಅಂತರ್ಯಾಮಿಯಾದ, ಲೋಕನಾಥನಾದ, ಸಂಸಾರದ ಪ್ರವರ್ತಕನಾದ ಪರಮಾತ್ಮನನ್ನು ಆದರದಿಂದ ದಿನದಿನವೂ ನೆನೆಸಿಕೊಳ್ಳುವುದು ಮುಖ್ಯ.

ದಿನ ಮೊದಲಾಗುವಾಗ ಈ ಸ್ಮರಣೆಯಿದ್ದರೆ ದಿನವೆಲ್ಲ ಒಳಿತಿನಲ್ಲೆ ಕಳೆಯುತ್ತದೆ; ಕೆಟ್ಟ ಕೆಲಸಗಳತ್ತ ಮನಸ್ಸು ಹೋಗುವುದಿಲ್ಲ. ಒಳ್ಳೆಯ ಕೆಲಸಕ್ಕೆ ಉತ್ಸಾಹವೂ ಒದಗುತ್ತದೆ.

(೨)

ಬ್ರಾಹ್ಮಧರ್ಮಬೀಜಂ

೧. ಓಂ ಬ್ರಹ್ಮ ವಾ ಏಕಮಿದಮಗ್ರ ಆಸೀತ್,
ನಾನ್ಯತ್ ಕಿಂಚನಾಸೀತ್, ತದಿದಂ ಸರ್ವಮಸೃಜತ್ ।

೨. ತದೇವ ನಿತ್ಯಂ ಜ್ಞಾನಮನಂತಂ ಶಿವಂ ಸ್ವತಂತ್ರಂ
ನಿರವಯಮೇಕಮೇವಾದ್ವಿತೀಯಂ ಸರ್ವವ್ಯಾಪೀ-
ಸರ್ವನಿಯಂತೃ-ಸರ್ವಾಶ್ರಯ-ಸರ್ವವಿತ್-
ಸರ್ವಶಾಂತಿಮದ್ ಧ್ರುವಂ ಪೂರ್ಣಮಪ್ರತಿಮಮಿತಿ ।

೩. ಏಕಸ್ಯ ತಸ್ಯೈವೋಪಾಸನಯಾ
ಪಾರತ್ರಿಕಮೈಹಿಕಂ ಚ ಶುಭಂ ಭವತಿ ।

೪. ತಸ್ಮಿನ್ ಪ್ರೀತಿಸ್ತಸ್ಯ ಪ್ರಿಯಕಾರ್ಯ-
ಸಾಧನಂ ಚ ತದುಪಾಸನಮೇವ ॥

ಬ್ರಾಹ್ಮಧರ್ಮದ ಬೀಜ

೧. ಪೂರ್ವದಲ್ಲಿ ಕೇವಲ ಪರಬ್ರಹ್ಮ ಒಂದೇ ಇದ್ದಿತು. ಅದನ್ನು ಬಿಟ್ಟು ಬೇರೇನೂ ಇರಲಿಲ್ಲ. ಅದೇ ಇದೆಲ್ಲವನ್ನೂ ಸೃಷ್ಟಿಮಾಡಿತು

೨. ಆ ಪರಬ್ರಹ್ಮವು ಜ್ಞಾನಸ್ವರೂಪ, ಅನಂತಸ್ವರೂಪ, ಮಂಗಲಸ್ವರೂಪ; ನಿತ್ಯ, ನಿಯಂತೃ (ನಿಯಾಮಕ), ಸರ್ವಜ್ಞ, ಸರ್ವವ್ಯಾಪಿ, ಸರ್ವಾಶ್ರಯ, ನಿರವಯವ, ನಿರ್ವಿಕಾರ, ಏಕಮಾತ್ರ, ಅದ್ವಿತೀಯ, ಸರ್ವಶಕ್ತಿಮಂತ, ಸ್ವತಂತ್ರ ಮತ್ತು ಪರಿಪೂರ್ಣ. ಯಾವುದೂ ಅದಕ್ಕೆ ಪ್ರತಿಮೆ (ಪ್ರತೀಕ, ಉಪಮೆ) ಆಗಲಾರದು.

೩. ಏಕಮಾತ್ರವಾದ ಅದರ ಉಪಾಸನೆಯ ಮೂಲಕವೇ ಐಹಿಕ ಮತ್ತು ಪಾರತ್ರಿಕ ಮಂಗಳ ಆಗುವುದು.

೪. ಅದನ್ನು ಪ್ರೀತಿಸುವುದು ಮತ್ತು ಅದಕ್ಕೆ ಪ್ರಿಯವಾಗುವ ಕಾರ್ಯಗಳಲ್ಲಿ ತೊಡಗುವುದು ಅದರ ಉಪಾಸನೆಯೆನಿಸುವುದು.

ವಿವರಣೆ

ಬೃಹದಾರಣ್ಯಕ ಉಪನಿಷತ್ತಿನಿಂದ ಆಯ್ದುಕೊಂಡ ಒಂದು ವಾಕ್ಯದಿಂದ ಈ ಭಾಗವು ಮೊದಲಾಗುತ್ತದೆ. ಉಳಿದ ವಾಕ್ಯಗಳ ರಚನೆಯೆಲ್ಲ ಮಹರ್ಷಿ ದೇವೇಂದ್ರನಾಥರದ್ದೇ. ಸೃಷ್ಟಿಗೆ ಮೊದಲು ಬ್ರಹ್ಮವೊಂದನ್ನು ಬಿಟ್ಟು ಬೇರೇನೂ ಇರಲಿಲ್ಲ. ಅದೇ 'ಸತ್' ಎಂಬ ತತ್ತ್ವ. ಅದರಿಂದಲೇ ಎಲ್ಲವೂ ಹೊರಹೊಮ್ಮಿತು. ಈ ಎಲ್ಲವಾಗಿ ಅದು ಬೆಳೆದಿದ್ದರಿಂದಲೇ ಅದನ್ನು ಬ್ರಹ್ಮವೆಂದು ಕರೆಯುತ್ತಾರೆ ('ಬೃಹ್ ವೃದ್ಧೌ' ಎಂಬ ಧಾತುವಿನಿಂದ). ಬ್ರಹ್ಮವೊಂದೇ ದಿಟವಾಗಿ ಇರುವುದು. ಎಲ್ಲಕ್ಕೂ ಅದೊಂದೇ ಅಧಿಷ್ಠಾನ, ಆಸರೆ. ಬ್ರಹ್ಮವೇ ಎಲ್ಲದರ ಅಂತರ್ಯಾಮಿ.

ಈ ಬ್ರಹ್ಮದ ಸ್ವರೂಪವೇ ಅರಿವು (ಜ್ಞಾನ); ಬ್ರಹ್ಮಕ್ಕೆ ಕೊನೆ ಮೊದಲೆಂಬುದು ಇಲ್ಲವಾಗಿ ಈ ಅರಿವಿಗೂ ಕೊನೆ ಮೊದಲಿಲ್ಲ (ನಿತ್ಯ), ಅನಂತ; ಮತ್ತು ಸ್ವಭಾವದಲ್ಲಿ ಬ್ರಹ್ಮ ಮಂಗಳಕಾರಿಯಾದುದು; ಅದನ್ನು ಅರಿತುಕೊಳ್ಳುವುದರಿಂದ ಮನುಷ್ಯನು ತನ್ನ ಹಿತವನ್ನು ಸಾಧಿಸಿಕೊಳ್ಳುತ್ತಾನೆ; ಕೆಟ್ಟ ಕೆಲಸಗಳನ್ನು ಕೈಬಿಡುತ್ತಾನೆ; ಒಳಿತಿಗೇ ಒಲಿಯುತ್ತಾನೆ. ಇದನ್ನೇ 'ಶಿವ' ವೆಂದು ಕರೆದಿದ್ದಾರೆ (ಶಿವವೆಂದರೆ ಶುಭ, ಮಂಗಳ).

ಉಳಿದದ್ದೆಲ್ಲ ಅವನಿಗೆ ಅಧೀನವಾದುದು; ಅವನಾದರೆ ಯಾರಿಗೂ ಅಡಿಯಾಳಲ್ಲ, ಸ್ವತಂತ್ರ. ಅವನು ಅವಯವಗಳ ಒಕ್ಕೂಟವೆನ್ನಲಾಗದು. ಜಗತ್ತಿನ ವಸ್ತುಗಳಾದರೋ ನೆಲ, ನೀರು, ಬೆಂಕಿ, ಗಾಳಿ, ಆಕಾಶಗಳೆಂಬ ಐದು ಭೂತಗಳಿಂದ (ಮೂಲ ಸಾಮಗ್ರಿಗಳಿಂದ), ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ಆದುವು. ಇವೆಲ್ಲ ವಸ್ತುವಿನ ಅಂಗಗಳು, ಅವಯವಗಳು. ಬ್ರಹ್ಮ ಹೀಗೆ ಸಂಘಾತದಿಂದಾದ ವಸ್ತುವಲ್ಲ; ಅವನ್ನೆಲ್ಲ ಮೀರಿ ನಿಂತವನು, ಅವನಿಗೆ ಅವಯವಗಳಿಲ್ಲ (ನಿರವಯವ).

ಹಾಗೆಯೆ ಪ್ರಪಂಚದ ವಸ್ತುಗಳಿಗೆ ಹುಟ್ಟುವುದು, ಇರುವುದು, ಬೆಳೆಯುವುದು, ಇಳಿಯುವುದು, ಸಾವು, ಮರೆಯಾಗುವುದು ಮೊದಲಾದ ವಿಕಾರಗಳಿರುತ್ತವೆ. (ಷಡ್ಭಾವವಿಕಾರಗಳೆಂದು ಹೆಸರು). ಬ್ರಹ್ಮನಿಗೆ ಯಾವ ವಿಕಾರವೂ ಇರದು (ನಿರ್ವಿಕಾರ). ವಿಕಾರವಿದ್ದರೆ ಅಪೂರ್ಣ; ವಿಕಾರವಿರದಿದ್ದರೆ ಪರಿಪೂರ್ಣ.

ಮತ್ತೆ ಬ್ರಹ್ಮನಿಗೆ ಸಮನಾಗಿಯೋ ಹೆಚ್ಚಾಗಿಯೋ ಕಡಮೆಯಾಗಿಯೋ ಇನ್ನೊಂದು ತತ್ತ್ವ ಇದೆ ಎನ್ನುವಂತಿಲ್ಲ; ಇಬ್ಬರು ಬ್ರಹ್ಮರು ಎಂಬ ಎಣಿಕೆಯೇ ಸಾಧ್ಯವಿಲ್ಲ. ಅದಕ್ಕೆ ಎರಡನೆಯದಾಗಿಯೂ ಇನ್ನೊಂದು ತತ್ತ್ವವಿರದು. ಹೀಗೆ ಅದು ಏಕಮಾತ್ರ, ಅದ್ವಿತೀಯ. ಜಗತ್ತಿನಲ್ಲಿ ನಾವು ಯಾವ ಶಕ್ತಿಗಳನ್ನು ಕಾಣುವೆವೋ (ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ; ಬಯಸುವ ಶಕ್ತಿ ಅರಿತುಕೊಳ್ಳುವ ಶಕ್ತಿ, ಕೆಲಸಮಾಡುವ ಶಕ್ತಿ) ಅವೆಲ್ಲವೂ ಬ್ರಹ್ಮನ ಚೈತನ್ಯದಿಂದಲೇ ಆದುವು. ಹೀಗೆ ಅವನು ಸರ್ವಶಕ್ತಿಮಂತ.

ಅದಕ್ಕೆ ಸರಿಸಾಟಿಯಾದುದು ಬೇರೊಂದಿರದು. ಅದನ್ನು ಜಗತ್ತಿನ ಯಾವ ವಸ್ತುವಿಗೂ ಹೋಲಿಸಲು ಸಾಧ್ಯವಿಲ್ಲ. ಅದನ್ನು ಜಗತ್ತಿನ ಯಾವ ವಸ್ತುವಿನಲ್ಲೂ ಯಾವ ವಸ್ತುವಿನಿಂದಲೂ ಪ್ರತಿನಿಧಿಸುವಂತಿಲ್ಲ. ಶ್ರುತಿಯಲ್ಲಿ 'ನ ತಸ್ಯ ಪ್ರತಿಮಾ ಭವತಿ' ಎಂದು ಹೇಳಿರುವುದು ಈ ಅರ್ಥದಲ್ಲೆ. ಪ್ರತಿಮೆಯೆಂದರೆ ಪ್ರತಿಕೃತಿ, ಪ್ರತೀಕ, ಉಪಮೆ; ಅದರಂತೆಯೆ ಇರುವ ಇನ್ನೊಂದು. ಇದು ಬ್ರಹ್ಮ ವಿಚಾರದಲ್ಲಿ ಸಾಧ್ಯವಿರದು.

ಮನುಷ್ಯ ಈ ತತ್ತ್ವವನ್ನು ಕುರಿತಂತೆ ಮಾಡಬೇಕಾದುದು ಉಪಾಸನೆಯಷ್ಟೆ. ಉಪಾಸನೆಯೆಂಬ ಮಾತಿನಲ್ಲಿ ಹತ್ತಿರ (ಉಪ) ಕೂಡುವುದು (ಆಸನ) ಎಂಬ ಮೂಲಾರ್ಥವಿದೆ. ಉಪಾಸ್ಯವೆಂದಾದುದರ ಹಿರಿಮೆಯನ್ನು ಅರಿತುಕೊಂಡು, ಅದರತ್ತ ಶ್ರದ್ಧೆಯಿಂದ ಪ್ರೀತಿಯಿಂದ ಮನಸ್ಸನ್ನು ಹೊರಳಿಸುವುದು, ಅದರಲ್ಲೇ ಮನಸ್ಸನ್ನು ನಿಲ್ಲಿಸಿಕೊಳ್ಳುವುದು ಉಪಾಸನೆ. ಉಪಾಸ್ತಿ, ಭಕ್ತಿ, ವರಿವಸ್ಯಾ, ಆರಾಧನೆ, ಸೇವೆ, ಧ್ಯಾನ ಮೊದಾಲಾದುವೆಲ್ಲ ಪರ್ಯಾಯಪದಗಳು. ಭಕ್ತಿಯಲ್ಲಿ ಭಯದ ಪಾತ್ರವಿಲ್ಲ, ಸ್ವಾರ್ಥವೂ ಇರದು. ಉಪಾಸನೆಯಲ್ಲಿ ಉಪಾಸ್ಯವಾದುದನ್ನು ಪ್ರೀತಿಸುವುದು ಮುಖ್ಯ; ಭಕ್ತಿಯೆಂದರೆ ಪರಮಪ್ರೇಮರೂಪವೆಂದು ಗ್ರಂಥಗಳಲ್ಲಿ ನಿರ್ದೇಶನವಿದೆ. ಭಗವಂತನಲ್ಲಿ

ಭಕ್ತಿಮಾಡುವುದೆಂದರೆ ಅವನನ್ನು ಪ್ರೀತಿಸುವುದು, ಮತ್ತು ಅವನಿಗೆ ಪ್ರಿಯವಾದ ಕೆಲಸಗಳಲ್ಲೇ ತೊಡಗುವುದು; ಆದರಿಂದ ಅವನನ್ನು ಒಲಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಉಪಾಸ್ಯದ ಒಲುಮೆ, ಉಪಾಸಕನ ಒಲುಮೆ ಒಟ್ಟಿಗೆ ಕೂಡುತ್ತವೆ.

ನಮ್ಮ ಸಂಸಾರಕ್ಕೂ ಅವನೇ ಆಸರೆ, ನಮ್ಮ ಹಿತವೂ ಅವನಿಂದಲೇ. ಆತ್ಯಂತಿಕ ಹಿತವೆಂದರೆ ಮುಕ್ತಿ. ಐಹಿಕವೆಂದಾಗ ಇಲ್ಲಿ ನಮ್ಮ ಸಾಂಸಾರಿಕ ಬದುಕಿಗೆ ಬೇಕಾದ ಕಾಮ, ಅರ್ಥ, ಧರ್ಮಗಳೆಂಬ ಅಭ್ಯುದಯ. ಪಾರತ್ರಿಕವೆಂದಾಗ ಮುಕ್ತಿ. ಇವೆರಡೂ ಉಪಾಸನೆಯಿಂದಲೇ ಸಾಧ್ಯವಾಗುವುವು.

---

(೩)

ಬ್ರಾಹ್ಮಧರ್ಮಗ್ರಹಣಂ

|| ಓಂ ತತ್ ಸತ್ ||

೧. ಓಂ ಬ್ರಹ್ಮ ವಾ ಏಕಮಿದಮಗ್ರ ಆಸೀತ್, ನಾನ್ಯತ್
ಕಿಂಚನಾಸೀತ್, ತದಿದಂ ಸರ್ವಮಸೃಜತ್ ।

೨. ತದೇವ ನಿತ್ಯಂ ಜ್ಞಾನಮನಂತಂ ಶಿವಂ ಸ್ವತಂತ್ರಂ
ನಿರವಯವಮೇಕಮೇವಾದ್ವಿತೀಯಂ ಸರ್ವವ್ಯಾಪಿ-
ಸರ್ವನಿಯಂತೃ-ಸರ್ವಾಶ್ರಯ-ಸರ್ವವಿತ್-
ಸರ್ವ-ಶಾಂತಿಮದ್ ಧ್ರುವಂ ಪೂರ್ಣಮಪ್ರತಿಮಮಿತಿ ।

೩. ಏಕಸ್ಯ ತಸ್ಯೈವೋಪಾಸನಯಾ
ಪಾರತ್ರಿಕಮೈಹಿಕಂ ಚ ಶುಭಂ ಭವತಿ ।

೪. ಅಸ್ಮಿನ್ ಪ್ರೀತಿಸ್ತಸ್ಯ ಪ್ರಿಯ ಕಾರ್ಯ
ಸಾಧನಂ ಚ ತದುಪಾಸನಮೇವ ॥

ಅಸ್ಮಿನ್ ಬ್ರಾಹ್ಮಧರ್ಮಬೀಜೇ ವಿಶ್ವಾಸ್ಯ
ಬ್ರಾಹ್ಮಧರ್ಮಂ ಗೃಹ್ಣಾಮಿ ।

೫. ಓಂ ಸೃಷ್ಟಿ-ಸ್ಥಿತಿ-ಪ್ರಲಯಕರ್ತರಿ ಮುಕ್ತಿಕಾರಣೇ ಸರ್ವಜ್ಞೇ
ಸರ್ವವ್ಯಾಪಿನಿ ಪೂರ್ಣಾನಂದಮಂಗಲೇ ನಿರವಯವ
ಏಕಮಾತ್ರಾದ್ವಿತೀಯೇ ಪರಬ್ರಹ್ಮಣಿ ಪ್ರೀತ್ಯಾ
ತತ್ ಪ್ರಿಯಕಾರ್ಯಸಾಧನೇನ ಚ ತದುಪಾಸ್ಸ್ಯಾಮಿ ।

೬. ಸರ್ವಸ್ರಷ್ಟ್ರು ಪರಬ್ರಹ್ಮಾತಿಸೃಷ್ಟಂ
ಕಿಂಚಿನ್ನಾರಾಧಯಿಷ್ಯಾಮಿ ।

೭. ಅರುಗ್ಣೋऽವಿಪನ್ನಶ್ಚೇತ್ ಪ್ರತಿದಿನಂ ಯದಾ
ಚಿತ್ತೈಕಾಗ್ರತಾ ತದಾ ಶ್ರದ್ಧಯಾ ಪ್ರೀತ್ಯಾ ಚ
ಪರಬ್ರಹ್ಮಣಿ ಮನಃ ಸಮಾಧಾಸ್ಯಾಮಿ ।

೮. ಸದನುಷ್ಠಾನಾಯ ಯತಿಷ್ಯೇ

೯. ದುಷ್ಕೃತಿಭ್ಯೋ ನಿವೃತ್ತ್ಯೈ ಯತ್ನವಾನ್ ಭವಿಷ್ಯಾಮಿ ।

೧೦. ಯದಿ ಮೋಹಾತ್ ಕುಕರ್ಮ ಕಿಂಚಿತ್ ಕೃತಂ ಸ್ಯಾತ್,
ತದೈಕಾನ್ತತಸ್ತಸ್ಮಾನ್ಮುಕ್ತಿಮನ್ವಿಚ್ಛನ್ ನ ಪ್ರಮದಿಷ್ಯಾಮಿ ।

೧೧. ವರ್ಷೇ ವರ್ಷೇ ಮದೀಯೇ ಚ ತಾವತ್ ಸಾಂಸಾರಿಕ-
ಶುಭಕರ್ಮಣಿ ಬ್ರಹ್ಮಸಮಾಜಾಯ ದಾಸ್ಯಾಮಿ ।

ಹೇ ಪರಮಾತ್ಮನ್, ಮಾಂ ಪ್ರತಿ ಏತತ್
ಪರಮಧರ್ಮಪ್ರತಿಪಾಲನಸಾಮರ್ಥ್ಯಮರ್ಪಯ ।

॥ ಓಂ ಏಕಮೇವಾದ್ವಿತೀಯಂ ॥

ಬ್ರಾಹ್ಮಧರ್ಮವನ್ನು ಸ್ವೀಕರಿಸುವುದು

೧. ಪೂರ್ವದಲ್ಲಿ ಕೇವಲ ಪರಬ್ರಹ್ಮ ಒಂದೇ ಇದ್ದಿತು, ಅದನ್ನು ಬಿಟ್ಟು ಬೇರೇನೂ ಇರಲಿಲ್ಲ. ಅದೇ ಇದೆಲ್ಲವನ್ನೂ ಸೃಷ್ಟಿಮಾಡಿತು.

೨. ಆ ಪರಬ್ರಹ್ಮವು ಜ್ಞಾನಸ್ವರೂಪ, ಅನಂತಸ್ವರೂಪ, ಮಂಗಲಸ್ವರೂಪ, ನಿತ್ಯ, ನಿಯಂತೃ, ಸರ್ವಜ್ಞ, ಸರ್ವವ್ಯಾಪಿ, ಸರ್ವಾಶ್ರಯ, ನಿರವಯವ, ನಿರ್ವಿಕಾರ, ಏಕಮಾತ್ರ, ಅದ್ವಿತೀಯ,

ಸರ್ವಶಕ್ತಿಮಂತ, ಸ್ವತಂತ್ರ ಮತ್ತು ಪರಿಪೂರ್ಣ. ಯಾವುದೂ ಅದಕ್ಕೆ ಪ್ರತಿಮೆ (ಪ್ರತೀಕ, ಉಪಮೆ) ಆಗಲಾರದು.

೩. ಏಕಮಾತ್ರವಾದ ಅದರ ಉಪಾಸನೆಯ ಮೂಲಕವೇ ಐಹಿಕ ಮತ್ತು ಪಾರತ್ರಿಕ ಮಂಗಳ ಆಗುವುದು.

೪. ಅದನ್ನು ಪ್ರೀತಿಸುವುದು ಮತ್ತು ಅದಕ್ಕೆ ಪ್ರಿಯವಾಗುವ ಕಾರ್ಯಗಳಲ್ಲಿ ತೊಡಗುವುದು ಅದರ ಉಪಾಸನೆಯೆನಿಸುವುದು.

— ಈ ಬ್ರಾಹ್ಮಧರ್ಮ ಬೀಜದಲ್ಲಿ ನಾನು ವಿಶ್ವಾಸಪೂರ್ವಕ ವಾಗಿ ಬ್ರಾಹ್ಮಧರ್ಮವನ್ನು ಗ್ರಹಣ ಮಾಡುತ್ತಿದ್ದೇನೆ.

೫. ಓಂ ಸೃಷ್ಟಿ, ಸ್ಥಿತಿ, ಪ್ರಳಯಗಳ ಕರ್ತೃವೂ, ಐಹಿಕ-ಪಾರತ್ರಿಕ ಮಂಗಳದಾಯಕನೂ, ಸರ್ವಜ್ಞ, ಸರ್ವವ್ಯಾಪಿ, ಮಂಗಳಸ್ವರೂಪ, ನಿರವಯವ, ಏಕಮಾತ್ರ, ಅದ್ವಿತೀಯ, ಪರಬ್ರಹ್ಮವನ್ನು ಪ್ರೀತಿ ಮಾಡುವುದರ ಮೂಲಕ ಮತ್ತು ಅದಕ್ಕೆ ಪ್ರಿಯವಾಗುವ ಕಾರ್ಯ ಗಳಲ್ಲಿ ತೊಡಗುವುದರ ಮೂಲಕ ಪರಬ್ರಹ್ಮದ ಉಪಾಸನೆಯಲ್ಲಿ ನಿರತನಾಗಿರುತ್ತೇನೆ.

೬. ಪರಬ್ರಹ್ಮವನ್ನು ಅರಿಯುವುದರ ವಿನಾ ಇನ್ನಾವ ವಸ್ತು ವನ್ನೂ ನಾನು ಆರಾಧಿಸುವುದಿಲ್ಲ.

೭. ರೋಗ ಮತ್ತಾವ ವಿಪತ್ತಿನಿಂದಾಗಿ ನನಗೆ ಸಾಧ್ಯವಿರದಿದ್ದಾಗ ಬಿಟ್ಟು, ಪ್ರತಿ ದಿನವೂ ಶ್ರದ್ಧೆ ಮತ್ತು ಪ್ರೀತಿಗಳಿಂದ ಕೂಡಿ ಪರಬ್ರಹ್ಮದಲ್ಲಿ ನನ್ನ ಆತ್ಮವನ್ನು ನೆಲೆಗೊಳಿಸುವೆ.

೮. ಒಳ್ಳೆಯ ಕೆಲಸಗಳನ್ನು ಮಾಡುವುದರಲ್ಲಿ ಯತ್ನಶೀಲ ನಾಗಿರುತ್ತೇನೆ.

೯. ಕೆಟ್ಟಕೆಲಸಗಳನ್ನು ಮಾಡದಿರಲು ಯತ್ನಮಾಡುತ್ತೇನೆ.

೧೦. ಒಂದುವೇಳೆ ಮೋಹದಿಂದಾಗಿ ಕೆಟ್ಟಕೆಲಸ ಯಾವುದಾದರೂ ನನ್ನಿಂದ ನಡೆದಿದ್ದರೆ, ಅದಕ್ಕೆ ನೈಜವಾಗಿ ಪಶ್ಚಾತ್ತಾಪಪಟ್ಟು ಅದರಿಂದ ವಿರತನಾಗುತ್ತೇನೆ.

೧೧. ಬ್ರಾಹ್ಮಧರ್ಮದ ಉನ್ನತಿಯನ್ನು ಸಾಧಿಸಲು ಪ್ರತಿ ವರ್ಷವೂ ಸಂಸಾರದಲ್ಲಿ ನಡೆಯುವ ಶುಭಕರ್ಮಗಳ ಸಂದರ್ಭದಲ್ಲಿ ಬ್ರಾಹ್ಮಸಮಾಜಕ್ಕೆ ದಾನಮಾಡುತ್ತೇನೆ.

ಹೇ ಪರಮಾತ್ಮನೆ, ಈ ಪರಮ ಧರ್ಮವನ್ನು ಚೆನ್ನಾಗಿ ಪ್ರತಿಪಾಲನೆ ಮಾಡಲು ನನಗೆ ಸಾಮರ್ಥ್ಯವನ್ನು ನೀಡು.

॥ ಓಂ ಏಕಮೇವಾದ್ವಿತೀಯಂ ॥

ವಿವರಣೆ

ಮೊದಲ ವಾಕ್ಯಗಳೆಲ್ಲವೂ ಹಿಂದಿನ ಪರಿಚ್ಛೇದದಲ್ಲಿ ಬಂದವೇ. ಅವನ್ನು ಬ್ರಾಹ್ಮಧರ್ಮದ ಬೀಜಗಳೆಂದೇ ಕರೆದಿದ್ದಾರಷ್ಟೆ? ಬೀಜವೆಂದರೆ ಸಾರಭೂತವಾದದ್ದು; ಸಂಗ್ರಹರೂಪದ್ದು; ಮುಂದಿನ ಬೆಳವಣಿಗೆಗೆ ಸಮರ್ಥವಾದದ್ದು, ಅಗತ್ಯವಾದದ್ದು. ಇವನ್ನು ಆಧಾರವಾಗಿರಿಸಿಕೊಂಡು ಸಾಧಕನು ಬ್ರಾಹ್ಮಧರ್ಮವನ್ನು ಗ್ರಹಿಸಬೇಕು.

ಮುಂದಿನ ಏಳು ವಾಕ್ಯಗಳು ಪ್ರತಿಜ್ಞೆಯ ರೂಪದಲ್ಲಿವೆ. ಅವು ಸರಳವಾಗಿರುವುದರಿಂದ ವಿವರಣೆಯ ಅಗತ್ಯವಿರದು. ಬ್ರಹ್ಮತತ್ತ್ವದ ಉಪಾಸನೆಯನ್ನು ಬದುಕಿನುದ್ದಕ್ಕೂ ಎಡೆಬಿಡದೆ ನಡೆಸುವೆನೆಂಬ ಸಂಕಲ್ಪವನ್ನು ಉಪಾಸಕನು ಮಾಡತಕ್ಕದ್ದು. ಉಪಾಸನೆಯ ಮುಖ್ಯ ವಿವರ ಬ್ರಹ್ಮನನ್ನು ಅರಿತುಕೊಳ್ಳುವುದೇ; ಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವುದೇ. ಸರ್ವವ್ಯಾಪಿಯಾದ, ಅದ್ವಿತೀಯನಾದ, ಮಂಗಳಸ್ವರೂಪಿಯಾದ ಬ್ರಹ್ಮನನ್ನು ಬಿಟ್ಟು ಬೇರೆ

ಯಾವೊಂದು ತತ್ತ್ವವನ್ನೂ ಉಪಾಸನೆಗೆ ಗ್ರಹಿಸಬಾರದು. ಸೃಷ್ಟಿಯಲ್ಲಿರುವ ಯಾವೊಂದು ವಿವರವೂ ಬ್ರಹ್ಮವೆಂಬ ಬುದ್ಧಿಗೆ ಆಸ್ಪದವಾಗಬಾರದು.

ಉಪಾಸನೆಗೆ ನೆರವಾಗುವಂತೆ ಸತ್ಕಾರ್ಯದಲ್ಲಿ ಶ್ರದ್ಧೆ, ಪಾಪಕಾರ್ಯದಲ್ಲಿ ವಿರತಿ ಇವು ಕೂಡ ಪ್ರತಿಜ್ಞೆಯಲ್ಲಿ ಸೇರುತ್ತವೆ.

ಉಪಾಸನೆಯು ಪ್ರಯೋಜನಕಾರಿಯಾಗಲು, ಸಫಲವಾಗಲು ಅದರಲ್ಲಿ ನೈರಂತರ್ಯವಿರಬೇಕು. ಎಂದರೆ ಅದು ಎಡೆಬಿಡದೆ ನಡೆಯಬೇಕು. ಅದಕ್ಕೆಂದೇ ಗೊತ್ತಾದ ವೇಳೆಯನ್ನು ತಪ್ಪಿಸಬಾರದು. ಬದುಕಿನಲ್ಲಿ ಉಪಾಸನೆಯು ಮುಖ್ಯವಾದುದೆಂಬುದು ಯಾವಾಗಲೂ ನೆನಪಿನಲ್ಲಿರಬೇಕು; ಯಾವ ಕಾರಣದಿಂದಲೂ ಮರೆಯಬಾರದು.

ಉಪಾಸನೆಯನ್ನು ಮಾಡುವಾಗಲೂ ತಾನೇ, ತನ್ನಿಂದಲೇ ಮಾಡುತ್ತಿದ್ದೇನೆಂಬ ಗರ್ವ ಇರಬಾರದು. ಉಪಾಸನೆ ಮಾಡುವ ಸಾಮರ್ಥ್ಯವಾಗಲಿ ಸಂಕಲ್ಪವಾಗಲಿ ಪರಮಾತ್ಮನಿಂದಲೇ ಬಂದೊದಗಬೇಕು. ಭಕ್ತಿಯು ದಿಟವಾಗಿ ಭಗವಂತನ ಪ್ರಸಾದವೇ; 'ನಿನ್ನಲ್ಲಿ ಭಕ್ತಿಮಾಡುವಂತೆ ನನಗೆ ಪ್ರೇರಣೆ ಮಾಡು' ಎಂದೇ ಭಕ್ತನು ಭಗವಂತನನ್ನು ಬೇಡಿಕೊಳ್ಳಬೇಕು. ನಾವು ಅವನತ್ತ ಹೊರಳುವುದು ಅವನು ನಮ್ಮನ್ನು ತನ್ನತ್ತ ಸೆಳೆದುಕೊಂಡಾಗಲೇ.

(೪)

ಪ್ರತಿಜ್ಞಾಸ್ಮರಣಾರ್ಥಶ್ಲೋಕಾಃ

ಯದಸ್ಯ ಜಗತೋ ಜನ್ಮ-ಸ್ಥಿತಿ-ಭಂಗಾದಿ ಕಾರಣಂ
ಅಮೃತಸ್ಯ ಚ ಯನ್ಮೂಲಮೇಕಂ ಬ್ರಹ್ಮ ಸನಾತನಂ,
ಪ್ರೀತ್ಯಾ ಪರಮಯಾ, ತಸ್ಯ ಪ್ರಿಯಕಾರ್ಯನಿಷೇವಯಾ,
ಉಪಾಸ್ಯಂ ತನ್ಮಯಾ, ನಾನ್ಯತ್ ಸೃಷ್ಟಂ ಕಿಂಚನ ತದ್ಧಿಯಾ
॥ ೧ ॥

ಯದಾ ಕದಾ ಪ್ರತಿದಿನಂ ನಾಪನ್ನಶ್ಚೇನ್ನ ರೋಗವಾನ್
ಶ್ರದ್ಧಾಪ್ರೀತಿಯುತಂ ಚಿತ್ತಂ ಸಮಾಧಾಸ್ಯೇ ತದೇಶ್ವರೇ ॥ ೨ ॥

ಸದನುಷ್ಠಾನನಿರತೋ ವಿರತಶ್ಚ ತಥಾಽಸತಃ
ಸರ್ವದಾಹಂ ಭವಿಷ್ಯಾಮಿ ಪ್ರೀಣನಾಯ ಪರಾತ್ಮನಃ ॥ ೩ ॥

ಅಜ್ಞಾನಾದ್ ಯದಿ ವಾ ಮೋಹಾತ್ ಕುರ್ಯಾಂ
ಕರ್ಮ ವಿಗರ್ಹಿತಂ
ತಸ್ಮಾದ್ವಿಮುಕ್ತಿಮನ್ವಿಚ್ಛನ್ ನಾಚರಿಷ್ಯಾಮಿ ತತ್ಪುನಃ ॥ ೪ ॥

ಪ್ರತಿವರ್ಷೇ ತಥಾ ಚೈವ ಮದ್ ಗೃಹೇ ಶುಭಕರ್ಮಣಿ
ದೇಯಂ ಬ್ರಾಹ್ಮಸಮಾಜಾಯ ಪ್ರತಿಜ್ಞಾತಮಿದಂ ಮಯಾ
॥ ೫ ॥

ವಿವರಣೆ

ಹಿಂದೆ ಹೇಳಿದ ವಿವರಗಳೇ ಇಲ್ಲಿ ಐದು ಪ್ರತಿಜ್ಞಾಶ್ಲೋಕಗಳ ರೂಪದಲ್ಲಿ ಬಂದಿವೆ. ನೆನಪಿನಲ್ಲಿರಿಸಿಕೊಳ್ಳಲು ಈ ಶ್ಲೋಕಗಳು ನೆರವಾಗುತ್ತವೆ. ಈ

ಶ್ಲೋಕಗಳನ್ನು ಮಹರ್ಷಿಯವರೇ ರಚಿಸಿದಂತೆ ತೋರುತ್ತದೆ. ಮೊದಲನೆಯ ಶ್ಲೋಕದಲ್ಲಿ ಜಗತ್ತಿನ ಹುಟ್ಟು, ಇರವು, ಅಳಿವುಗಳಿಗೆ ಕಾರಣನೂ, ಅಮೃತ ಸ್ವರೂಪನೂ ಸನಾತನನೂ ಆದ ಬ್ರಹ್ಮವಸ್ತುವೇ ಉಪಾಸ್ಯ; ಜಗತ್ತಿನ ಯಾವ ವಿವರವೂ (ಎಂದರೆ ವಿಗ್ರಹ, ಚಿತ್ರಪಟ, ಮರ, ಗಿಡ, ಬೆಟ್ಟ ಮೊದಲಾದುವು) ಉಪಾಸ್ಯವಾಗಲಾರದು ಎಂದು ಹೇಳಲಾಗಿದೆ. ಉಪಾಸನೆಯಲ್ಲಿ ಪ್ರೀತಿ ಮುಖ್ಯವಾದುದು; ಉಪಾಸ್ಯವನ್ನು ಪ್ರೀತಿಗೊಳಿಸುವುದು ಮುಖ್ಯ. ಇದು ಮೊದಲನೆಯ ಪ್ರತಿಜ್ಞೆ.

ಚಿತ್ತವನ್ನು ಪ್ರೀತಿಯಿಂದ ಶ್ರದ್ಧೆಯಿಂದ ಈಶ್ವರನಲ್ಲಿ ನೆಲೆಗೊಳಿಸುವುದೇ ಉಪಾಸನೆಯೆಂದು ಶ್ಲೋಕದ ಧ್ವನಿ.

ಪ್ರತಿದಿನವೂ ಉಪಾಸನೆ ನಡೆಯಲೆಬೇಕು. ರೋಗಿಯಾದರೆ ವಿಧಿಯಿಲ್ಲ, ತೀರಲಾರದ ಕಷ್ಟ (ವಿಪತ್ತು) ಬಂದರೆ ವಿಧಿಯಿಲ್ಲ, ಉಪಾಸನೆ ತಪ್ಪುತ್ತದೆ. ಅಂಥ ಅನಿವಾರ್ಯವಿರದಿದ್ದರೆ ಉಪಾಸನೆ ನಿತ್ಯಕರ್ಮ, ನಿತ್ಯವಿಧಿ. ಅದನ್ನು ತಪ್ಪಿಸುವುದಿಲ್ಲವೆಂದು ಪ್ರತಿಜ್ಞೆ ಕೈಗೊಳ್ಳಬೇಕು.ಇದು ಎರಡನೆಯ ಪ್ರತಿಜ್ಞೆ.

ಪರಮಾತ್ಮನನ್ನು ಪ್ರೀತಿಗೊಳಿಸುವುದೇ ಉಪಾಸನೆಯ ಉದ್ದೇಶವೆಂದ ಮೇಲೆ ಒಳ್ಳೆಯ ಕೆಲಸಗಳಲ್ಲೆ ತೊಡಗಬೇಕು (ಸದನುಷ್ಠಾನ), ಕೆಟ್ಟ ಕೆಲಸಗಳಿಂದ ಹಿಂದೆಗೆಯಬೇಕು (ಅಸದ್ವಿರತಿ). ಇದು ಮೂರನೆಯ ಪ್ರತಿಜ್ಞೆ. ವೃತ್ತಿ-ಪ್ರವೃತ್ತಿಗಳಿಂದ ತಾತ್ಕಾಲಿಕ ಭಾವ ಉದ್ವೇಗದಿಂದ ಬುದ್ಧಿ ದಾರಿ ತಪ್ಪಿ, ಧೃತಿಗೆಟ್ಟು ಮಾಡಬಾರದ ಕೆಲಸವನ್ನು ಮಾಡಿದರೆ, ಒಡನೆಯೆ ಪಶ್ಚಾತ್ತಾಪ ಪಟ್ಟು ಮತ್ತೆ ಅಂಥ ಕೆಲಸದಲ್ಲಿ ತೊಡಗುವುದಿಲ್ಲವೆಂದು ನಿರ್ಧಾರವನ್ನು ಕೈಗೊಳ್ಳಬೇಕು. ಕಡೆಯ ಪ್ರತಿಜ್ಞೆ, ತನಗೆ ಬದುಕಿನಲ್ಲಿ ಮಾರ್ಗದರ್ಶನ ಮಾಡುತ್ತಿರುವ ಸಮಾಜಕ್ಕೆ ತನ್ನದೊಂದು ಋಣವಿದೆಯೆಂಬುದನ್ನು ಕಂಡುಕೊಂಡು, ತನ್ನ ಕೈಲಾದ ಕಾಣಿಕೆಯನ್ನು ಸಮಾಜಕ್ಕೆ ನೀಡುವುದು. ಸಮಾಜದ ಸದಸ್ಯರ ಶ್ರದ್ಧಾದರ ಕೈಂಕರ್ಯಗಳಿಲ್ಲದೆ ಸಮಾಜದ ಸ್ಥಿತಿಯಾಗಲಿ ಉತ್ತಮಗೊಳ್ಳಲಾರದು.

(೫)

ಬ್ರಹ್ಮೋಪಾಸನಾ

ಅರ್ಚನಾ

ಓಂ ಪಿತಾ ನೋऽಸಿ, ಪಿತಾ ನೋ ಬೋಧಿ,
ನಮಸ್ತೇऽಸ್ತು ಮಾ ಮಾ ಹಿಂಸೀಃ ।
ವಿಶ್ವಾನಿ ದೇವ ಸವಿತರ್ದುರಿತಾನಿ ಪರಾಸುವ,
ಯದ್ ಭದ್ರಂ ತನ್ನ ಆಸುವ ।

ನಮಃ ಶಂಭವಾಯ ಚ ಮಯೋಭವಾಯ ಚ,
ನಮಃ ಶಂಕರಾಯ ಚ ಮಯಂತರಾಯ ಚ,
ನಮಃ ಶಿವಾಯ ಚ ಶಿವತರಾಯ ಚ ॥

ನೀನು ನಮ್ಮೆಲ್ಲರ ತಂದೆ; ತಂದೆಯು ಮಕ್ಕಳಿಗೆ ನೀಡುವಂತೆ ನಮಗೂ ಜ್ಞಾನಶಿಕ್ಷೆಯನ್ನು ನೀಡು. ನಿನಗೆ ನಮಸ್ಕಾರ. ನಮ್ಮನ್ನು ಮೋಹ-ಪಾಪಗಳಿಂದ ರಕ್ಷಿಸು; ನಮ್ಮನ್ನು ಕೈಬಿಡದಿರು, ನಮ್ಮ ವಿನಾಶವನ್ನು ಮಾಡದಿರು. ಎಲೆ ದೇವನೆ, ಎಲೆ ತಂದೆಯೆ, ಪಾಪಗಳನ್ನೆಲ್ಲ ತೊಡೆದುಬಿಡು. ಕಲ್ಯಾಣವೆಂತಾಗುವುದೋ ಅಂತೆಯೆ ಪ್ರೇರಣೆ ಮಾಡು. ನೀನು ಸುಖವನ್ನುಂಟುಮಾಡುವವನು, ಕಲ್ಯಾಣವನ್ನುಂಟು ಮಾಡುವವನು. ಸುಖ-ಕಲ್ಯಾಣಗಳ ಗಣಿ ನೀನೇ. ಕಲ್ಯಾಣನೂ ಹೌದು, ಕಲ್ಯಾಣತರನೂ ಹೌದು, ನಿನಗೆ ನಮಸ್ಕಾರ.

ವಿವರಣೆ

ಸಂಸ್ಕೃತದಲ್ಲಿ 'ಪಿತೃ', 'ಪಿತಾ' (ತಂದೆ) ಎಂಬ ಮಾತಿಗೆ ಪಾಲಕ, ಪೋಷಕ ಎಂಬರ್ಥಗಳಿವೆ; ನಮ್ಮ ಹುಟ್ಟಿಗೆ ಕಾರಣನಾದವನು ಎಂಬರ್ಥವೂ ಉಂಟಷ್ಟೆ?

ನಮ್ಮ ಬದುಕನ್ನು ಪೂರ್ಣಮಾಡುವವನು, ನಮ್ಮನ್ನು ಕೃತಾರ್ಥರನ್ನಾಗಿ ಮಾಡುವವನು ಎಂದೂ ಆಗುತ್ತದೆ. ಹೀಗೆ ಪರಮಾತ್ಮನು ನಮಗೆ 'ಪಿತೃ'ಸ್ಥಾನೀಯನಾದವನು. ಲೋಕದಲ್ಲಿ ತಂದೆಯು ಮಗನನ್ನು ತಿದ್ದಿ, ಕಲಿಸಿ, ಶಿಕ್ಷಿಸಿ ದೊಡ್ಡವನನ್ನಾಗಿ ಮಾಡುವುದು ವಾಡಿಕೆಯಲ್ಲವೆ? ಹಾಗೆಯೇ ಪರಮಾತ್ಮನು ನಮಗೆ ಬದುಕುವ ಬಗೆಯನ್ನು ಕಲಿಸಬೇಕು. ಹಾಗೆ ಮಾಡೆಂಬ ಕೋರಿಕೆ ಇಲ್ಲಿದೆ. 'ಪಿತಾ ನೋ ಬೋಧಿ' ಎಂಬ ವಾಕ್ಯಕ್ಕೆ ನೀನು ನಮ್ಮ ಪಿತೃವೆಂಬುದನ್ನೂ ನಮಗೆ ತಿಳಿಸಿಕೊಡು ಎಂಬರ್ಥವೂ ಆಗಬಹುದು. ತತ್ತ್ವದ ಅರಿವು ನಮ್ಮಲ್ಲಿ ಉಂಟಾಗಲು ಪರಮಾತ್ಮನ ಅನುಗ್ರಹವಾಗಬೇಕು. ಈ ಅನುಗ್ರಹವನ್ನು ಪಡೆದುಕೊಳ್ಳಲೆಂದು ಪರಮಾತ್ಮನಿಗೆ ಶರಣುಹೋಗಬೇಕು. ಅದೇ ನಮಸ್ಕಾರ ಮಾಡುವುದರ ಇಂಗಿತ.

ಅವನ ಅನುಗ್ರಹವಿರದಿದ್ದರೆ ತೊಂದರೆಗಳು ನಮ್ಮನ್ನು ಕಾಡದೆ ಬಿಡುವುದಿಲ್ಲ. ದೇಹಕ್ಕೆ, ಇಂದ್ರಿಯಗಳಿಗೆ, ಮನಸ್ಸಿಗೆ ಗಾಸಿಯಾಗದಿರುವಂತೆಯೂ ಕೋರಿಕೊಳ್ಳಬೇಕು. ಮನುಷ್ಯನನ್ನು ಹಿಂಸೆಗೀಡುಮಾಡುವ ವಿವರಗಳು ಅಜ್ಞಾನ, ಮೋಹ, ಪಾಪಬುದ್ಧಿ, ಕಾಮಕ್ರೋಧಾದಿಗಳು. ಇವುಗಳಿಂದೆಲ್ಲ ನಮಗೆ ರಕ್ಷಣೆ ಬೇಕು. ಕೆಟ್ಟ ಆಲೋಚನೆ, ಕೆಟ್ಟ ಭಾವನೆ, ಕೆಟ್ಟ ಸಂಕಲ್ಪ, ಕೆಟ್ಟ ಕೆಲಸ ಎಲ್ಲವೂ ದುರಿತಗಳೇ, ಎಂದರೆ ಪಾಪಗಳೇ. ಇವೇ ನಮ್ಮನ್ನು ಸುತ್ತರಿದಿರುತ್ತವೆ. ಇವನ್ನು ದೂರ ಓಡಿಸೆಂದೂ, ಯಾವುದು ನಮಗೆ ಹಿತವೋ ಅದನ್ನು ಬರಮಾಡೆಂದೂ ಹಗಲಿರುಳೂ ನಾವು ಪ್ರಾರ್ಥನೆ ಮಾಡಬೇಕು.

'ಶಂ' ಎಂದರೆ ಒಳಿತು; ಅದನ್ನುಂಟುಮಾಡುವವನು 'ಶಂಭವ'. 'ಮಯ' ಎಂದರೆ ಸುಖ, ಕಲ್ಯಾಣ; ಅದನ್ನೊದಗಿಸುವವನು 'ಮಯೋಭವ'. ಪರಮಾತ್ಮನೇ ಶಂಭವ, ಮಯೋಭವ; ಶಂಕರ (ಶುಭವನ್ನು ಮಾಡುವವನು), ಮಯಂಕರ (ಸುಖವನ್ನು ಮಾಡುವವನು), ಅವನೇ ಮಂಗಳಮಯ (ಶಿವ); ಕಲ್ಯಾಣರೂಪಿ. ಹೆಚ್ಚಿನ ಮಂಗಳವೆಂದರೆ ಹಿತ, ಮುಕ್ತಿ. ಇದು ಶಿವತರ (ಕಲ್ಯಾಣತರ).

ಹೀಗೆ ನಮ್ಮನ್ನು ಸಲಹುವ ಪರಮಾತ್ಮನಿಗೆ ನಮಸ್ಕಾರ.

ಪ್ರಣಾಮಃ

ಓಂ ಯೋ ದೇವ್ರೋಽಗ್ನೌ ಯೋಽಪ್ಸು
ಯೋ ವಿಶ್ವಂ ಭುವನಮಾವಿವೇಶ ।
ಯ ಓಷಧಿಷು ಯೋ ವನಸ್ಪತಿಷು
ತಸ್ಮೈ ದೇವಾಯ ನಮೋ ನಮಃ ॥

ಯಾವ ದೇವತೆಯು ಅಗ್ನಿಯಲ್ಲಿರುವನೋ ಜಲದಲ್ಲಿರುವನೋ, ಯಾರು ವಿಶ್ವಸಂಸಾರದಲ್ಲಿ ಪ್ರವಿಷ್ಟನಾಗಿರುವನೋ, ಯಾರು ಓಷಧಿ-ವನಸ್ಪತಿಗಳಲ್ಲಿಯೂ ಇರುವನೋ ಆ ದೇವತೆಗೆ ಮತ್ತೆ ಮತ್ತೆ ನಮಸ್ಕಾರ ಮಾಡುತ್ತೇನೆ.

ವಿವರಣೆ

ಪರಬ್ರಹ್ಮನ ಸರ್ವವ್ಯಾಪಕತ್ವವನ್ನು ತಿಳಿಸುವ ಮಂತ್ರ ಇದು. ಪಂಚ ಭೂತಗಳಲ್ಲಿ ಮತ್ತು ಸಸ್ಯಾದಿ ಪ್ರಾಣಿವರ್ಗದಲ್ಲಿ ಅಂತರ್ಯಾಮಿಯಾಗಿರುವನು. ವಿಶ್ವವನ್ನು ಸೃಷ್ಟಿ ಮಾಡಿ ತಾನು ಅದರೊಳಗೆ ಪ್ರವೇಶ ಮಾಡಿದನೆಂದು ಶ್ರುತಿ ('ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'). ಎಲ್ಲ ವಸ್ತುಗಳಲ್ಲೂ ಬೆಳಗುವವನು ಅವನೇ ಆದುದರಿಂದ 'ದೇವ'ನೆನಿಸಿಕೊಳ್ಳುತ್ತಾನೆ.

ಸಮಾಧಾನಂ

ಓಂ ಸತ್ಯಂ ಜ್ಞಾನಮನಂತಂ ಬ್ರಹ್ಮ ।
ಆನಂದರೂಪಮಮೃತಂ ಯದ್ವಿಭಾತಿ ।
ಶಾಂತಂ ಶಿವಮದ್ವೈತಂ ॥

ಅವನು ನಮ್ಮೆಲ್ಲರನ್ನೂ ಸೃಷ್ಟಿಸಿದವನು, ಪಾಲಿಸುವವನು, ಸರ್ವಸುಖವನ್ನೂ ನಮ್ಮೆಲ್ಲರಿಗೆ ನೀಡುವವನು. ನಮ್ಮೆಲ್ಲರ ಜೀವನದ ಜೀವನ; ಮತ್ತು ನಮ್ಮೆಲ್ಲ ಮಂಗಳಗಳಿಗೆ ಮೂಲಕಾರಣ. ಅವನ ಪ್ರಸಾದದಿಂದಲೇ ನಾವು ಶರೀರ, ಮನಸ್ಸು, ಬುದ್ಧಿ, ಬಲ, ಜ್ಞಾನ, ಧರ್ಮಗಳನ್ನು ಪಡೆದುಕೊಂಡಿರುವೆವು. ನಮ್ಮ ಶರೀರಕ್ಕಾಗಲಿ ಮನಸ್ಸಿಗಾಗಲಿ ಆತ್ಮಕ್ಕಾಗಲಿ ನಾನಾ ಬಗೆಯಾದ ವಿಘ್ನಗಳು ಬಂದಾಗ ಸರ್ವದಾ ರಕ್ಷಿಸುವವನು ಅವನೇ. ಅವನು ಸತ್ಯಸ್ವರೂಪ, ಜ್ಞಾನ ಸ್ವರೂಪ, ಅನಂತಸ್ವರೂಪನಾದ ಪರಬ್ರಹ್ಮ. ಅವನು ಆನಂದ ರೂಪದಲ್ಲಿ, ಅಮೃತರೂಪದಲ್ಲಿ ಪ್ರಕಾಶಗೊಳ್ಳುತ್ತಾನೆ. ಅವನು ಶಾಂತ, ಮಂಗಳ, ಅದ್ವಿತೀಯ. ಅನನ್ಯವಾದ ಮನಸ್ಸುಳ್ಳವರಾಗಿ ಪ್ರೀತಿ ಪೂರ್ವಕ ವಾಗಿ ಆ ಅದ್ವಿತೀಯ ಮಂಗಳ ಸ್ವರೂಪದಲ್ಲಿ ತಮ್ಮ ಆತ್ಮವನ್ನು ನೆಲೆಗೊಳಿಸಬೇಕು (ಇದೇ ಸಂ + ಆಧಾನ, ಎಂದರೆ ಚೆನ್ನಾಗಿ ಇರಿಸುವುದು.)

ವಿವರಣೆ

ಮೊದಲ ವಾಕ್ಯ ತೈತ್ತಿರೀಯ ಉಪನಿಷತ್ತಿನದು. ಬ್ರಹ್ಮನ ಸ್ವರೂಪವನ್ನು ತಿಳಿಸುತ್ತದೆ. ಸತ್ಯ (ಇರವು), ಜ್ಞಾನ (ಅರಿವು) ಮತ್ತು ಕೊನೆ ಮೊದಲಿಲ್ಲದ್ದು (ಅನಂತ, ಎಂದರೆ ನಿತ್ಯ) ಬ್ರಹ್ಮ. ಇರುವುದೆಲ್ಲ ಅದೇ ಎಲ್ಲ ಅರಿವೂ ಅದರದ್ದೇ.

ಅದೇನು ಸೃಷ್ಟಿಯ ಕಟ್ಟುಪಾಡಿಗೆ ಒಳಪಟ್ಟದ್ದಲ್ಲ. ಅದೇ ಸೃಷ್ಟಿಗೆ ಕಾರಣವಾದದ್ದು. ಸೃಷ್ಟಿಗಾದರೆ ಮೊದಲು, ನಡುವೆ, ಕೊನೆ ಎಂಬುದುಂಟು. ಇರುತ್ತದೆ, ಬೆಳೆಯುತ್ತದೆ, ಇಳಿಯುತ್ತದೆ ಮರೆಯಾಗುತ್ತದೆ ಎಂಬ ವಿಕಾರಗಳುಂಟು. ಬ್ರಹ್ಮ ಇದನ್ನೆಲ್ಲ ಮೀರಿದವನು. ಎಂದೆಂದೂ ಇರುವವನು, ಯಾವಾಗಲೂ ಎಲ್ಲವನ್ನೂ ಅರಿತುಕೊಳ್ಳುವವನು (ಸರ್ವಜ್ಞ).

ಮತ್ತೆ ಅವನ ರೂಪ ಆನಂದಮಯವಾದುದು; ಅಮೃತವೇ ಅವನ ಸ್ವರೂಪ. 'ಸತ್ಯಂ ಜ್ಞಾನಮಾನಂದಂ ಬ್ರಹ್ಮ' ಎಂದೂ ಮಾತಿದೆ. ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮ ನಮ್ಮೊಡಲೊಳಗೆ ಬೆಳಗುವುದು ಆನಂದದ ರೂಪದಲ್ಲಿಯೇ. ಹಾಗಾಗಿ ಬ್ರಹ್ಮನಿಗೆ ಸತ್-ಚಿತ್-ಆನಂದ ಎಂಬ ನಿರ್ದೇಶನ. ಬ್ರಹ್ಮನು ತೋರಿಕೊಳ್ಳುವಾಗ ಒದಗುವ ಆನಂದಕ್ಕೆ ಪಾರ ಅಥವಾ ಕೊನೆಯೆಂಬುದಿಲ್ಲ; ತೋರಿ ಮರೆಯಾಗುವ ಲೌಕಿಕ ಆನಂದದಂತಲ್ಲ ಅದು. ಬ್ರಹ್ಮನ ಆನಂದವು ಅಮೃತ (ಅನಂತ) ಅಪಾರ.

ಈ ಬ್ರಹ್ಮವಸ್ತುವಿನಲ್ಲಿ ಯಾವ ವಿಕಾರವೂ ಇರಲಾರದು; ಸೃಷ್ಟಿಯ ಯಾವ ವಿವರವೂ ಅದನ್ನು ಕದಡಲು ಆಗದು. ಪ್ರಾಪಂಚಿಕವಾದ ರಾಗ-ದ್ವೇಷಾದಿಗಳಿಗೆ ಅಲ್ಲಿ ಆಸ್ಪದವೇ ಇಲ್ಲ. ಆದುದರಿಂದ ಅದು ಎಂದೂ ಶಾಂತವೇ. ಬ್ರಹ್ಮ-ಸಾಕ್ಷಾತ್ಕಾರವಾದವನಿಗೂ ಶಾಂತಿಯೆ ಲಾಭ. ಸಂಸಾರದ ಎಲ್ಲ ತೊಂದರೆಗಳನ್ನೂ ಮೀರಿ ಅದಿರುವುದರಿಂದ ಮತ್ತು ಬದುಕಿನ ಗುರಿಯಾದ ಮುಕ್ತಿಗೆ ಅದೇ ಕಾರಣವಾದುದರಿಂದ ಶಿವ (ಶುಭ, ಕಲ್ಯಾಣ, ಮಂಗಳ) ಮತ್ತು ಅದಕ್ಕೆ ಹಿರಿದಾದುದಾಗಲಿ ಎಣೆಯಾಗಲಿ ಯಾವುದೂ ಇಲ್ಲವಾಗಿ ಅದು ಅದ್ವೈತ. (ಎರಡನೆಯದಿಲ್ಲದ್ದು).

ಓಂ ಸ ಪರ್ಯಗಾಚ್ಛುಕ್ರಮಕಾಯಮವ್ರಣ-
ಮಸ್ನಾವಿರಂ ಶುದ್ಧಮಪಾಪವಿದ್ಧಂ ।
ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಾಥಾ
ತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರೂಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥
ಭಯಾದಸ್ಯಾಗ್ನಿಸ್ತಪತಿ, ಭಯಾತ್ತಪತಿ ಸೂರ್ಯಃ ।
ಭಯಾದಿಂದ್ರಶ್ಚ ವಾಯುಶ್ಚ, ಮೃತ್ಯುರ್ಧಾವತಿ ಪಂಚಮಃ ॥

ಅವನು ಸರ್ವವ್ಯಾಪಿ, ನಿರ್ಮಲ, ನಿರವಯವ, ಅವನಿಗೆ ಸಿರೆಗಳಿಲ್ಲ, ವ್ರಣಗಳಿಲ್ಲ; ಅವನು ಶುದ್ಧ; ಪಾಪಗಳ ಸೋಂಕಿಲ್ಲದವನು; ಅವನು ಸರ್ವದರ್ಶಿ; ಮನಸ್ಸನ್ನು ನಿಯಂತ್ರಣ ಮಾಡುವವನು. ಅವನು ಎಲ್ಲಕ್ಕೂ ಮಿಗಿಲಾದವನು. ಸ್ವಪ್ರಕಾಶ. ಎಲ್ಲ ಕಾಲದಲ್ಲೂ ಅವನು ಎಲ್ಲರಿಗೂ ಉಪಯುಕ್ತವಾಗುವ ವಸ್ತುಗಳನ್ನು ಒದಗಿಸುವನು.

ಅವನಿಂದಲೇ ಪ್ರಾಣ, ಮನಸ್ಸು, ಇಂದ್ರಿಯಸಮುದಾಯ, ಆಕಾಶ, ವಾಯು, ಜ್ಯೋತಿ, ಜಲ ಎಲ್ಲವೂ ಹೊರಬಂದಿವೆ.

ಎಲ್ಲಕ್ಕೂ ಆಧಾರವಾದ ಭೂಮಿಯೂ ಅವನಿಂದಲೆ ಉಂಟಾದದ್ದು. ಅವನ ಭಯದಿಂದಲೆ ಬೆಂಕಿ ಉರಿಯುತ್ತದೆ. ಅವನ ಭಯದಿಂದಲೆ ಸೂರ್ಯ ಬೆಳಗುತ್ತಾನೆ. ಅವನ ಭಯದಿಂದಲೆ ಮೋಡ ಮಳೆಗರೆಯುತ್ತದೆ, ಗಾಳಿ ಸಂಚಲಿಸುತ್ತದೆ; ಮತ್ತು ಸಾವು ಸುಳಿದಾಡುತ್ತದೆ.

ವಿವರಣೆ

ಮೊದಲನೆಯ ಮಂತ್ರ ಈಶಾವಾಸ್ಯೋಪನಿಷತ್ತಿನದು (೮ನೆಯ ಮಂತ್ರ). ಎರಡನೆಯದು ಮುಂಡಕೋಪನಿಷತ್ತಿನಿಂದ ಆಯ್ದುಕೊಂಡುದು (೨, ೧, ೩). ಮೂರನೆಯದು ಕಠೋಪನಿಷತ್ತಿನಲ್ಲಿ ಕಂಡುಬರುತ್ತದೆ (೨, ೩).

ಮೊದಲನೆಯ ಮಂತ್ರ ಬ್ರಹ್ಮವಸ್ತುವನ್ನು ಬಣ್ಣಿಸುತ್ತದೆ. ಅದು ಎಲ್ಲೆಡೆಯಿಂದಲೂ ಎಲ್ಲವನ್ನೂ ಆವರಿಸಿಕೊಂಡಿದೆ (ಪರಿ ಅಗಾತ್); ಎಂದರೆ ಸರ್ವವ್ಯಾಪಿ. ಎಲ್ಲೆಲ್ಲೂ ಅದೇ ಇರುವದು. ಅದನ್ನು ಬಿಟ್ಟು ಬೇರೇನೂ ಇರದು. ಎಲ್ಲೆಡೆಯೂ ಇದ್ದರೂ ಯಾವುದರ ಅಂಟೂ ಅದಕ್ಕಿರದು; ಅದರ ಬೆಳಕು ಯಾವುದರಿಂದಲೂ ಮಾಸಲಾರದು, ಮುಸುಕಲಾರದು (ಶುಕ್ರ). ಅದು ಪ್ರಾಪಂಚಿಕ ಪದಾರ್ಥಗಳಂತೆ ಅಣುಗಳಿಂದ, ತುಣುಕುಗಳಿಂದ, ಭೂತಗಳಿಂದ, ಗುಣಗಳಿಂದ ಕೂಡಿದ್ದಲ್ಲ; ಹೀಗೆ ಅದಕ್ಕೆ ಶರೀರವೆಂಬುದೇ ಇಲ್ಲ (ಅಕಾಯ). ಇಂಥ ಶರೀರವಲ್ಲದ್ದರಿಂದ ಅದರೊಳಗೆ ಸ್ನಾಯುಗಳಂತೆ ಯಾವ ವ್ಯವಸ್ಥೆಯೂ ಇರದು. ಇಂಥ ಸಂಘಟನೆ ಇಲ್ಲವಾಗಿ, ಅದಕ್ಕೆ ಗಾಸಿಯಾಗುವುದು ಎಂದಿಗೂ ಸಾಧ್ಯವಿಲ್ಲ (ಅವ್ರಣ).

ಪ್ರಪಂಚವನ್ನು ಹೊರಹೊಮ್ಮಿಸಿ ಅದರ ನಿರ್ವಹಣೆಯ ಹೊಣೆಯನ್ನು ಹೊತ್ತವನಾದರೂ ಬ್ರಹ್ಮ ಪ್ರಪಂಚದ ಯಾವ ಕೊಳೆಯನ್ನೂ ಅಂಟಿಸಿಕೊಂಡವನಲ್ಲ (ಶುದ್ಧ). ಪ್ರಪಂಚದ ಜೀವರಾಶಿ ಮಾಡುವ ಪಾಪದ ಸೋಂಕು ಅವನಿಗೆ ಎಷ್ಟು ಮಾತ್ರಕ್ಕೂ ಇರದು (ಅಪಾಪವಿದ್ಧ). ಪ್ರಪಂಚದ ವ್ಯಾಪಾರವೆಲ್ಲ ಅವನ ಕವಿತೆಯೆ, ಶಿಲ್ಪವೇ; ಪ್ರಪಂಚದ ಕಣ್ಣು ಕಾಣುವುದಕ್ಕಿಂತ ಎಷ್ಟೋ ದೂರ ಅವನು ಕಾಣಬಲ್ಲ. ಅವನ ದೃಷ್ಟಿ ಎಲ್ಲವನ್ನೂ ದಾಟಿದ್ದು (ಕವಿ). ಅವನು ಎಲ್ಲರ ಮನಸ್ಸಿಗೂ ಒಡೆಯ (ಮನೀಷೀ); ಮನಸ್ಸಿನ ಕೆಲಸ ನಡೆಯುವುದು ಅವನಿಂದಲೇ.

ಎಲ್ಲವನ್ನೂ ಸುತ್ತಲೂ ಆವರಿಸಿಕೊಂಡು ಅವನಿದ್ದಾನೆ (ಪರಿಭೂಃ); ಎಲ್ಲದರ ಒಳಗೂ ಹೊರಗೂ ಇರುವುದು ಅವನೊಬ್ಬನೇ. ಮತ್ತೆ ಅವನಿಗೆ ಕಾರಣವಾಗಿ ಬೇರೊಂದು ತತ್ತ್ವವಿರದು; ತನಗೆ ತಾನೇ ತೋರಿಕೊಂಡವನು (ಸ್ವಯಂಭೂಃ); ಅವನನ್ನು ಬೆಳಗಬಲ್ಲ ಬೆಳಕು ಮತ್ತೊಂದಿಲ್ಲ.

ಪ್ರಪಂಚದ ಎಲ್ಲರಿಗೆ ಎಲ್ಲೆಲ್ಲೂ ಎಲ್ಲ ಕಾಲಕ್ಕೂ (ಶಾಶ್ವತೀಭ್ಯಃ ಸಮಾಭ್ಯಃ) ಬೇಕಾಗುವ ಎಲ್ಲವನ್ನೂ (ಅರ್ಥಾನ್) ತಪ್ಪದೆ (ಯಾಥಾತಥ್ಯತಃ) ಏರ್ಪಡಿಸಿರುವವನು (ವ್ಯದಧಾತ್) ಅವನೇ.

ಮುಂಡಕೋಪನಿಷತ್ತಿನ ಮಂತ್ರವು ವಿಶ್ವದಲ್ಲಿ ಏನೇನು ಇವೆಯೋ ಅವೆಲ್ಲವೂ ಬ್ರಹ್ಮನಿಂದಲೇ (ಏತಸ್ಮಾತ್) ಹೊರಬಂದುವು (ಜಾಯತೇ) ಎಂಬುದನ್ನು ತಿಳಿಸುತ್ತದೆ. ವ್ಯಕ್ತಿಗೆ ಸಂಬಂಧಪಟ್ಟಂತೆ ಪ್ರಾಣ (ಉಸಿರಾಡುವ, ಬಲವನ್ನೊದಗಿಸುವ, ದೇಹದ ಕ್ರಿಯೆಗಳನ್ನೆಲ್ಲ ನಿರ್ವಹಿಸುವ ಶಕ್ತಿ) ಮತ್ತು ಎಲ್ಲ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಬ್ರಹ್ಮನಿಂದಲೇ ಉಂಟಾದುವು; ಎಲ್ಲಕ್ಕೂ ಅವನೇ ಕಾರಣ, ಅವನದ್ದೆ ಪ್ರೇರಣೆ, ಪ್ರಪಂಚದಲ್ಲಿ ಎಲ್ಲ ಇರವಿಗೂ ಕಾರಣವಾದ ಪಂಚಭೂತಗಳು (ಆಕಾಶ, ವಾಯು, ಜ್ಯೋತಿ, ಜಲ, ಭೂಮಿ) ಇವನಿಂದಲೇ ಹೊರಹೊಮ್ಮಿಬಂದುವು, ಇವನಿಂದಲೇ ಏರ್ಪಟ್ಟವು, ಇವನ ಆಳ್ವಿಕೆಯಲ್ಲೇ ಇವೆ. ಬ್ರಹ್ಮನು ಸರ್ವವ್ಯಾಪಿ ಮಾತ್ರವಲ್ಲ, ಸರ್ವಾಧಾರ, ಸರ್ವಕಾರಣ.

ಕಠೋಪನಿಷತ್ತಿನ ಮಂತ್ರದಲ್ಲಿ ಬ್ರಹ್ಮನ ನಿಯಮನವನ್ನು ಯಾರೂ ಮೀರಲಾರರು ಎಂಬುದು ಬಂದಿದೆ. ಪ್ರಪಂಚವನ್ನು ಸೃಷ್ಟಿಮಾಡಿ ಜೀವಿಗಳ ಉದ್ಧಾರಕ್ಕಾಗಿ ಸೃಷ್ಟಿಕರ್ತನು ಮಾಡಿರುವ ಕಟ್ಟಳೆಗಳು ಯಾವ ಕಾಲಕ್ಕೂ ಸರಿಯಾದುವು; ಆದ್ದರಿಂದಲೇ ಅವೆಲ್ಲ ಶಾಶ್ವತವಾದ ಪ್ರಾಚೀನವಾದ ಧರ್ಮಗಳು ('ತಾನಿ ಧರ್ಮಾಣಿ ಪ್ರಥಮಾನ್ಯಾಸನ್'), 'ಸನತಾ ಧರ್ಮಾಣಿ' ಎಂದು ವೇದದ ಒಕ್ಕಣೆ. ಅದು ಋತ; ಪ್ರಕೃತಿನಿಯಮ. ಇದರ ಒಡೆಯನೇ ಪುರುಷ, ಬ್ರಹ್ಮ. ಯಾರೂ ಮೀರಲರಿಯದ, ಅನುಲ್ಲಂಘ್ಯವಾದ ಋತವನ್ನು ಪಾಲಿಸುವುದೇ ಪೋಷಿಸುವುದೇ ಮನುಷ್ಯರ ಧರ್ಮ. ಬ್ರಹ್ಮನಿಗೆ ಭಯಗೊಂಡೇ ಪ್ರಪಂಚದ ಎಲ್ಲ, ವ್ಯವಹಾರವೂ ನಡೆಯುತ್ತಿರುವುದು ಎಂದು ಆಲಂಕಾರಿಕವಾಗಿ ಹೇಳಲಾಗಿದೆ. ಬೆಂಕಿಯ ಧರ್ಮ ಉರಿಯುವುದು, ಅದು ಬೇರೇನೂ ಮಾಡಲಾರದು. ಸೂರ್ಯನ ಕೆಲಸ ಬೆಳಗುವುದು. ಬೇರೆ ಯಾವ ಹವ್ಯಾಸವನ್ನೂ ಅವನು ಹಚ್ಚಿಕೊಳ್ಳುವುದಿಲ್ಲ. ಬ್ರಹ್ಮನ ಪ್ರತಿನಿಧಿಗಳಾಗಿ ಅಭಿವ್ಯಕ್ತಿಗಳಾಗಿ ಎಲ್ಲ ದೇವತೆಗಳೂ ತಂತಮ್ಮ ಧರ್ಮದಲ್ಲೇ ತೊಡಗಿದ್ದಾರೆ. ಇಲ್ಲಿ ದೇವತೆಗಳೆಂದರೆ ಪ್ರಕೃತಿನಿಯಮಗಳೇ. ಲೋಕದಲ್ಲಿ ಸೇವಕರು ಒಡೆಯನ ಹೆದರಿಕೆಯಿಂದಲೇ ಕೆಲಸ ಮಾಡುವರೆಂಬ ಎಣಿಕೆಯಿಲ್ಲವೆ ? ಅದನ್ನೆ ಇಲ್ಲಿ ರೂಪಕವಾಗಿ ಬಳಸಿಕೊಂಡಿದ್ದಾರೆ.

ಬ್ರಹ್ಮನು ಭಯವನ್ನುಂಟುಮಾಡುವವನು ಎಂದೇನು ಅರ್ಥವಲ್ಲ. ನಮ್ಮಲ್ಲಿ ಪರಮಾತ್ಮನು ಮಂಗಳಸ್ವರೂಪ, ಆನಂದರೂಪ; ಭಯಂಕರನಲ್ಲ.

ಹಿಂದೆ ಹೇಳಿದಂತೆ, ಭಕ್ತಿಯು ಭಯದಿಂದ ಮೈದುಂಬಿ ಬರಲಾರದು; ಪ್ರೀತಿಯೆ ಅದರ ಆಸರೆ. ಮಂಗಳಸ್ವರೂಪನೆಂದಾದಮೇಲೆ, ಆನಂದವೇ ಅವನ ರೂಪವೆಂದಾದಮೇಲೆ ಅವನಲ್ಲಿ ಸಹಜವಾಗಿ ಮೂಡಿಕೊಳ್ಳುವುದು ಪ್ರೀತಿಯೇ ತಾನೆ ?

ಧ್ಯಾನಂ

ಓಂ ಭೂರ್ಭುರ್ವಃ ಸ್ವಃ ತತ್ಸವಿತುರ್ವರೇಣ್ಯಂ ।
ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ
ಪ್ರಚೋದಯತ್ ॥

ಸರ್ವಲೋಕಪ್ರಕಾಶಕ, ಸರ್ವವ್ಯಾಪಿಯಾದ ಅವನೇ ಪೂರ್ಣ; ಮಂಗಳ, ಜಗತ್‌ಪ್ರಸವಿತ; ಪರಮ, ದೇವತೆಗಳಲ್ಲೆಲ್ಲ ವರಣೀಯವಾದ ಜ್ಞಾನ ಮತ್ತು ಶಕ್ತಿ. ಅವನನ್ನು ಧ್ಯಾನಮಾಡುತ್ತೇವೆ. ಅವನು ನಮಗೆಲ್ಲರಿಗೂ ಬುದ್ಧಿಯನ್ನು ವೃದ್ಧಿಮಾಡಲಿ, ಎಲ್ಲ ಪ್ರೇರಣೆಗಳನ್ನೊದಗಿಸಲಿ.

ವಿವರಣೆ

ಇದು ಪ್ರಸಿದ್ಧವಾದ ಗಾಯತ್ರೀ ಮಂತ್ರ. ಋಗ್ವೇದದಲ್ಲಿ (೩, ೬೨, ೧೦) ಮತ್ತು ಯಜುರ್ವೇದದಲ್ಲಿ (೩, ೩೫) ಬರುತ್ತದೆ. ವಿಶ್ವಾಮಿತ್ರಋಷಿದ್ರಷ್ಟವೆಂದು ಹೆಸರಾದ ಈ ಮಂತ್ರವು ಗಾಯತ್ರೀ ಛಂದಸ್ಸಿನಲ್ಲಿರುವುದರಿಂದ ಮಂತ್ರವು ಗಾಯತ್ರಿಯೆನಿಸಿಕೊಂಡಿದೆ. ಇಪ್ಪತ್ತುನಾಲ್ಕು ಅಕ್ಷರಗಳು, ಮೂರು ಪಾದಗಳು ಇರುವ ಛಂದಸ್ಸು ಗಾಯತ್ರಿ. ಈ ಮಂತ್ರದ ದೇವತೆ ಸವಿತೃ (ಎಂದರೆ ವಿಶ್ವವನ್ನೆಲ್ಲ ಹೊರಹೊಮ್ಮಿಸುವ ಶಕ್ತಿ), ಸೂರ್ಯನ ಒಂದು ರೂಪ.

ಮಂತ್ರವು 'ತತ್ಸವಿತುರ್ವರೇಣ್ಯಂ' ಎಂದು ಮೊದಲಾಗುತ್ತದೆ. ಅದಕ್ಕೆ ಮೊದಲು ಓಂಕಾರ (ಪರಬ್ರಹ್ಮನ ಸಂಕೇತ ಪ್ರಣವ), ಮೂರು ವ್ಯಾಹೃತಿಗಳು (ಭೂಃ ಭುವಃ ಸ್ವಃ) ಸೇರಿಕೊಳ್ಳುತ್ತವೆ. ವ್ಯಾಹೃತಿಗಳು ಮೂರು ಲೋಕಗಳನ್ನು (ಸೆಲೆಗಳನ್ನು) ಸಂಕೇತಿಸುತ್ತವೆ. ಭೂಃ ಎಂದರೆ ಭೂಲೋಕ, ಭುವಃ ಎನ್ನುವುದು ನಡುವಣ ಲೋಕ (ಅಂತರಿಕ್ಷ); ಸ್ವಃ ಎಂದರೆ ಮೇಲಿನ ಲೋಕ, ದ್ಯುರ್ಲೋಕ, ಆಕಾಶ. ನೆಲದಲ್ಲಿ ಅಗ್ನಿ, ನಡುವೆ ವಾಯು, ಮೇಲೆ ಸೂರ್ಯ ಇವು ಪರಬ್ರಹ್ಮನನ್ನು ಪ್ರತಿನಿಧಿಸುತ್ತವೆ.

'ತತ್' (ಅದು ಎಂದರ್ಥ) ಎಂದರೆ ನಿರ್ಗುಣನಾದ, ಸರ್ವವ್ಯಾಪಿಯಾದ ಬ್ರಹ್ಮನೇ. ಬೇರೆ ಯಾವ ರೀತಿಯಿಂದಲೂ ಬ್ರಹ್ಮನನ್ನು ನಿರ್ದೇಶಿಸುವುದು ಸಾಧ್ಯವಿಲ್ಲ. ಇವನೇ ಸವಿತೃವಾಗಿ (ಎಂದರೆ ಎಲ್ಲ ಜೀವಗಣಗಳಿಗೂ ಕಾರಣನಾಗಿ, ಚರಾಚರಜಗತ್ತಿನ ಮೂಲವಾಗಿ) ತೋರಿಕೊಳ್ಳುತ್ತಾನೆ. ಅವನು ತಾನೂ ಬೆಳಗಿ ಎಲ್ಲವನ್ನೂ ಬೆಳಗಿಸುವುದರಿಂದ ದೇವ. ಎಲ್ಲರಿಂದಲೂ ಉಪಾಸ್ಯನಾದುದರಿಂದ ವರೇಣ್ಯ. ಅವನ ಬೆಳಕು ಪಾಪವನ್ನೆಲ್ಲ ಸುಡುವುದರಿಂದ ಭರ್ಗ. ಇಂಥ ಸವಿತೃನಾಮಕ ಪರಬ್ರಹ್ಮನನ್ನು ನಾವು ಮನಸ್ಸಿನಲ್ಲಿ ನೆಲೆಗೊಳಿಸಿಕೊಳ್ಳಬೇಕು, ಧ್ಯಾನಮಾಡಬೇಕು (ಧೀಮಹಿ). ಅವನ ಬೆಳಕು ನಮ್ಮೆಲ್ಲರ ಬುದ್ಧಿಗಳನ್ನು ಸತ್ಕರ್ಮಗಳತ್ತ, ಉಪಾಸನೆಯತ್ತ ಪ್ರೇರಿಸಲಿ ಎಂಬುದು ಆಶಯ.

ಸ್ತೋತ್ರಂ

ಓಂ ನಮಸ್ತೇ ಸತೇ ತೇ ಜಗತ್ಕಾರಣಾಯ
ನಮಸ್ತೇ ಚಿತೇ ಸರ್ವಲೋಕಾಶ್ರಯಾಯ ।
ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ಶಾಶ್ವತಾಯ ॥

ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ ಪಾಲಕಂ ಸ್ವಪ್ರಕಾಶಂ ।
ತ್ವಮೇಕಂ ಜಗತ್ ಕರ್ತೃ ಪಾತೃ ಪ್ರಹರ್ತೃ
ತ್ವಮೇಕಂ ಪರಂ ನಿಶ್ಚಲಂ ನಿರ್ವಿಕಲ್ಪಂ ॥

ಭಯಾನಾಂ ಭಯಂ ಭೀಷಣಂ ಭೀಷಣಾನಾಂ
ಗತಿಃ ಪ್ರಾಣಿನಾಂ ಪಾವನಂ ಪಾವನಾನಾಂ ।
ಮಹೋಚ್ಚೈಃ ಪದಾನಾಂ ನಿಯಂತೃ ತ್ವಮೇಕಂ
ಪರೇಷಾಂ ಪರಂ ರಕ್ಷಣಂ ರಕ್ಷಣಾನಾಂ ॥

ವಯಂ ತ್ವಾಂ ಸ್ಮರಾಮೋ ವಯಂ ತ್ವಾಂ ಭಜಾಮೋ
ವಯಂ ತ್ವಾಂ ಜಗತ್ಸಾಕ್ಷಿರೂಪಂ ನಮಾಮಃ ।
ಸದೇಕಂ ನಿಧಾನಂ ನಿರಾಲಂಬಮೀಶಂ
ಭವಾಂಭೋಧಿಪೋತಂ ಶರಣ್ಯಂ ವ್ರಜಾಮಃ ॥

ನೀನು ಸತ್ ಸ್ವರೂಪ ಮತ್ತು ಜಗತ್ತಿಗೆ ಕಾರಣನಾದವನು. ಹಾಗೂ ಜ್ಞಾನಸ್ವರೂಪ. ಎಲ್ಲಕ್ಕೂ ಎಲ್ಲರಿಗೂ ಆಶ್ರಯ ನೀನೇ. ನಿನಗೆ ನಮಸ್ಕಾರ. ನೀನೆ ಮುಕ್ತಿದಾತ, ಅದ್ವಿತೀಯ, ನಿತ್ಯ ಮತ್ತು ಸರ್ವವ್ಯಾಪಿಯಾದ ಬ್ರಹ್ಮ; ನಿನಗೆ ನಮಸ್ಕಾರ. ನೀನೇ ಎಲ್ಲರಿಗೂ ಆಶ್ರಯಸ್ಥಾನ; ನೀನೊಬ್ಬನೇ ಎಲ್ಲರಿಂದಲೂ ವರಣೀಯನಾದವನು. ನೀನೇ ಈ ಜಗತ್ತಿನ ಪಾಲಕ, ಸ್ವಪ್ರಕಾಶ. ನಿನ್ನಿಂದಲೇ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯ. ಎಲ್ಲಕ್ಕಿಂತಲೂ ನೀನೇ ಶ್ರೇಷ್ಠ, ನೀನು ನಿಶ್ಚಲ, ದ್ವಿಧಾಶೂನ್ಯ. ನೀನೇ ಎಲ್ಲ ಭಯಕ್ಕೂ ಭಯ, ಭಯಾನಕಗಳಿಗೆ ಭಯಾನಕ. ಪ್ರಾಣಿಗಣಕ್ಕೆಲ್ಲ ನೀನೇ ಗತಿ, ಪಾವನಗಳಿಗೆ ಪಾವನ. ಎಲ್ಲಕ್ಕಿಂತ ದೊಡ್ಡ ಪದವೆಂದರೆ ನೀನೇ. ಎಲ್ಲಕ್ಕೂ ನಿಯಾಮಕ. ಶ್ರೇಷ್ಠವಾದುವುಗಳಲ್ಲಿ ಶ್ರೇಷ್ಠ, ರಕ್ಷಕಗಳಿಗೆ ರಕ್ಷಕ. ನಾವು ನಿನ್ನನ್ನು ಸ್ಮರಣೆ ಮಾಡುತ್ತೇವೆ, ನಾವು ನಿನ್ನನ್ನು ಭಜಿಸುತ್ತೇವೆ. ನೀನು ಜಗತ್ತಿಗೆ ಸಾಕ್ಷಿಸ್ವರೂಪ. ನಿನಗೆ ನಮಸ್ಕಾರ ಮಾಡುತ್ತೇವೆ. ನೀನು ಸತ್ಯ ಸ್ವರೂಪ, ಆಶ್ರಯ ಸ್ವರೂಪ. ನಿನಗೆ ಯಾರ ಅವಲಂಬನೆಯೂ ಇರದು. ಸಂಸಾರ ಸಾಗರವನ್ನು ದಾಟಿಸುವವನು ನೀನು. ಅದ್ವಿತೀಯ ಈಶ್ವರನಾದ ನಿನ್ನಲ್ಲಿ ಶರಣು ಹೊಂದಿದ್ದೇವೆ.

ವಿವರಣೆ

ಮಹಾನಿರ್ವಾಣತಂತ್ರದಲ್ಲಿ ಸೇರಿರುವ ಸ್ತೋತ್ರದ ನಾಲ್ಕು ಶ್ಲೋಕಗಳು ಇವು. ಯಾವ ವಿಶಿಷ್ಟ ದೇವತೆಯ ಸ್ತೋತ್ರವೂ ಅಲ್ಲದೆ, ಪರಬ್ರಹ್ಮನಿಗೆ ಹೊಂದಿಕೊಳ್ಳುವಂಥದು. ಸತ್ ಸ್ವರೂಪನೂ, ಚರಾಚರ ಜಗತ್ತಿನ ಕಾರಣ-

ಭೂತನೂ, ಸಕಲ ಲೋಕಗಳಿಗೂ ಆಶ್ರಯನೂ, ಮುಕ್ತಿಪ್ರದನೂ, ಸರ್ವ ವ್ಯಾಪಿಯೂ, ಅನಂತನೂ ಆದ ಪರಬ್ರಹ್ಮನು ಅದ್ವೈತ ತತ್ವವೆಂಬುದು ಇಲ್ಲಿ ಹೇಳಲ್ಪಟ್ಟಿದೆ. ಅದ್ವೈತವೆಂದರೆ ಇಲ್ಲಿ ಎರಡನೆಯದಿಲ್ಲದ ಏಕಮಾತ್ರ ತತ್ತ್ವ (ಏಕಂ ಏವ ಅದ್ವಿತೀಯಂ)

ಅವನೊಬ್ಬನೇ ಎಲ್ಲ ಉಪಾಸಕರಿಗೂ ಉಪಾಸ್ಯನಾದವನು; ಶರಣ್ಯ. ಜಗತ್ತಿನ ಎಲ್ಲ ವಸ್ತುಗಳೂ ಅವನನ್ನೆ ಬಯಸುವುವು; ವರೇಣ್ಯ. ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳು ಅವನಿಂದಲೇ. ವಿಶ್ವದ ನಿಯಾಮಕನಾದ ಅವನು ಸ್ವಪ್ರಕಾಶ. ಎಲ್ಲವನ್ನೂ ಬೆಳಗಿಸುವವನು ಅವನು; ಅವನನ್ನು ಬೆಳಗಿಸುವ ಬೆಳಕು ಅವನಲ್ಲದೆ ಇನ್ನೊಂದಿಲ್ಲ. ನಿರ್ವಿಕಾರ, ನಿಶ್ಚಲ ಅವನು.

ಭಯಗಳಿಗೆಲ್ಲ ಅವನು ಭಯ. ಎಂದರೆ ಅವನನ್ನು ಕಂಡು ಭಯಗಳೆಲ್ಲ ಓಡಿಹೋಗುತ್ತವೆ; ಅವನು ಅಭಯ. ಹಾಗೆಯೇ ನಮ್ಮನ್ನು ಬೆದರಿಸುವ ಗಾಸಿಗೊಳಿಸುವ ಎಲ್ಲವೂ ಬೆದರಿಹೋಗುತ್ತವೆ. ಪಾವನಗೊಳಿಸುವ ಕ್ರಮಗಳಲ್ಲಿ ಅವನ ಸಾಕ್ಷಾತ್ಕಾರವೇ ಅತ್ಯಂತ ಪಾವನವಾದುದು. ಹೆಚ್ಚಿನವು ಎಂಬ ಎಲ್ಲಕ್ಕೂ ಅವನೇ ಹೆಚ್ಚಿನವನು. ಅವನಿಗಿಂತ ಮಿಗಿಲಾದುದು ಬೇರೆ ಯಾವುದೂ ಇರದು. ಎಲ್ಲಕ್ಕೂ ನಿಯಾಮಕನು ಅವನು. ನಮ್ಮನ್ನು ಸಲಹುವ ವಿವರಗಳನ್ನು ಸಲಹುವವನು ಅವನೇ. ಎಂದರೆ ಅವನೊಬ್ಬನೆ ಎಲ್ಲರಿಗೂ ರಕ್ಷಕ.

ಜಗತ್ತಿನ ಸಾಕ್ಷಿ ಸ್ವರೂಪನಾಗಿರುವ ಅವನನ್ನೆ ನಾವು ಸ್ಮರಿಸಬೇಕು, ಆರಾಧಿಸಬೇಕು. ಎಲ್ಲರಿಗೂ ಅವನೊಬ್ಬನೆ ಆಶ್ರಯ; ಅವನು ಯಾರನ್ನಾಗಲಿ ಯಾವುದನ್ನಾಗಲಿ ಆಶ್ರಯಿಸುವುದಿಲ್ಲ (ನಿರಾಲಂಬ). ಸಂಸಾರವೆಂಬ ಸಾಗರವನ್ನು ದಾಟಿಸಲು ಸಮರ್ಥವಾದ ದೋಣಿಯೇ ಅವನು; ಇಂಥ ಒಡೆಯನಲ್ಲಿ ಶರಣು ಹೋಗುತ್ತೇವೆ.

ಪ್ರಾರ್ಥನಾ

ಎಲೆ ಪರಮಾತ್ಮನೆ, ಮೋಹದಿಂದ ಮಾಡಿದ ಪಾಪಗಳಿಂದ ನಮ್ಮನ್ನು ಬಿಡಿಸಿ, ಕೆಟ್ಟ ಆಲೋಚನೆಗಳಿಂದ ತಪ್ಪಿಸಿ, ನಿನ್ನಿಂದ ನಿಯಮಿತವಾದ ಧರ್ಮವನ್ನು ಪಾಲಿಸುವುದರಲ್ಲಿ ನಮ್ಮನ್ನು ತೊಡಗಿಸು. ಹೀಗೆ ಶ್ರದ್ಧೆ ಮತ್ತು ಪ್ರೀತಿಪೂರ್ವಕವಾಗಿ ದಿನದಿನವೂ ನಿನ್ನ ಪಾರಗಾಣದ ಮಹಿಮೆಯನ್ನು ಮತ್ತು ಪರಮ ಮಂಗಳ ಸ್ವರೂಪವನ್ನು ಚಿಂತನೆ ಮಾಡುವುದರಲ್ಲಿ ಉತ್ಸಾಹವನ್ನು ನೀಡು. ಈ ರೀತಿಯಾಗಿ ನಿನ್ನೊಂದಿಗೆ ನಿತ್ಯಸಹವಾಸದಿಂದ ಉಂಟಾದ ಭೂಮಾನಂದದ ಲಾಭವನ್ನು ಹೊಂದಿ ಕೃತಾರ್ಥನಾಗುವಂತಾಗಲಿ.

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಽಮೃತಂ ಗಮಯ ।
ಆವಿರಾವೀರ್ಮ ಏಧಿ ।
ರುದ್ರ, ಯತ್ತೇ ದಕ್ಷಿಣಂ ಮುಖಂ
ತೇನ ಮಾಂ ಪಾಹಿ ನಿತ್ಯಂ ॥

ನಮ್ಮನ್ನು ಅಸತ್ಯದಿಂದ ಸತ್‌ಸ್ವರೂಪದತ್ತ ಒಯ್ಯು, ಅಂಧಕಾರದಿಂದ ನಮ್ಮನ್ನು ಜ್ಯೋತಿಸ್ವರೂಪದತ್ತ ನಡೆಸು, ಮೃತ್ಯುವಿನಿಂದ ಅಮೃತ ಸ್ವರೂಪದ ಕಡೆ ನಡೆಸು. ಎಲೆ ಸ್ವಪ್ರಕಾಶನೆ, ನಮ್ಮ ಎದುರು ಪ್ರಕಾಶಿತನಾಗು. ರುದ್ರನೇ, ನಿನ್ನ ಪ್ರಸನ್ನವಾದ ದಕ್ಷಿಣ ಮುಖ ಯಾವುದಿದೆಯೋ ಅದರ ಮೂಲಕವಾಗಿ ನಮ್ಮನ್ನು ಸರ್ವದಾ ರಕ್ಷಿಸು.

॥ ಓಂ ಏಕಮೇವಾದ್ವಿತೀಯಂ ॥

ವಿವರಣೆ

'ಅಸತೋ ಮಾ ಸದ್ಗಮಯ' ಎಂದು ಆರಂಭವಾಗುವ ಮಂತ್ರವು ಶತಪಥಬ್ರಾಹ್ಮಣ (೧೪, ೪, ೧, ೩೦) ಮತ್ತು ಬೃಹದಾರಣ್ಯಕೋಪನಿಷತ್ತು (೧, ೩, ೩೦, ೩೧) ಇಲ್ಲಿ ಕಾಣಸಿಗುತ್ತದೆ. ಅಸತ್ತು (ದಿಟವಲ್ಲದುದು) ತಮಸ್ಸು (ಕತ್ತಲೆ, ಅಜ್ಞಾನ), ಮೃತ್ಯು (ಸಾವು, ಕೇಡು, ಕಾಮಗಳು) ಇವುಗಳಿಂದ ನಾವು ಪಾರಾಗಿ ಸತ್ (ದಿಟವಾದುದು, ಸತ್ಯ), ಜ್ಯೋತಿ (ಬೆಳಕು, ಜ್ಞಾನ) ಮತ್ತು ಅಮೃತ (ಸಾವಿಲ್ಲದಿರುವುದು, ಒಳಿತು, ಕಾಮಗಳಿಂದ ಬಿಡುಗಡೆ) ಇವನ್ನು ಪಡೆಯಬೇಕು. ಅಸತ್ತೆಂದರೇ ತಮಸ್ಸು; ಅದೇ ಮೃತ್ಯು. ಹಾಗೆಯೇ ಸತ್, ಜ್ಯೋತಿ, ಅಮೃತ ಇವು ಒಂದೇ ವಸ್ತುವಿನ ಮೂರು ರೂಪಗಳು, ಮೂರು ಹೆಸರುಗಳು. ಅದೇ ಬ್ರಹ್ಮ, 'ಸತ್ಯಂ ಜ್ಞಾನಂ ಅನಂತಂ' ಎಂಬ ನಿರ್ದೇಶನದ್ದು.

ಆವಿಯೆಂದರೆ ಬೆಳಕು, ಅರಿವು, ಜ್ಯೋತಿ; ಬ್ರಹ್ಮವಸ್ತುವೇ. ಅದು ತನ್ನೆಡೆಗೆ ಬರಲೆಂದೂ, ತನ್ನೆದುರು ತೋರಿಕೊಳ್ಳಲೆಂದೂ ಋಷಿಯ ಬಯಕೆ. ತನ್ನೊಡಲೊಳಗೇ ಇದ್ದರೂ ತನ್ನ ಬುದ್ಧಿಗೆ ಗೋಚರನಾಗಿರದೆ ಅಡಗಿರುತ್ತಾನೆ; ಬುದ್ಧಿಯ ಬೆಳಕಿನಲ್ಲಿ ಬ್ರಹ್ಮವನ್ನು ಕಾಣುವುದು ಸಾಧ್ಯ. ಬ್ರಹ್ಮನ ಸಾಕ್ಷಾತ್ಕಾರಕ್ಕೆ ಅಡ್ಡಿಯಾಗಿರುವುದು ಅಸತ್ತು, ತಮಸ್ಸು, ಮೃತ್ಯು.

ರುದ್ರನನ್ನು ಶ್ವೇತಾಶ್ವತರೋಪನಿಷತ್ತು ಒಂದೇ ಆಗಿರುವ ತತ್ತ್ವವೆಂದೂ ('ಏಕೋ ಹಿ ರುದ್ರೋ ನ ದ್ವಿತೀಯಾಯ') ಮತ್ತು ಎಲ್ಲದರ ಕಾರಣವೆಂದೂ ಒಡೆಯನೆಂದೂ ('ಪ್ರಭವಃ ವಿಶ್ವಾಧಿಪಃ') ವರ್ಣಿಸಿದೆ; ಅದು ಬ್ರಹ್ಮನಿಗೆ ಪರ್ಯಾಯಪದ. ತೈತ್ತಿರೀಯಸಂಹಿತೆ, ರುದ್ರಾಧ್ಯಾಯದಲ್ಲಿಯೂ ಇದೇ ಒಕ್ಕಣೆಯಿದೆ. ರುದ್ರನಿಗೆ ಕ್ರೂರ (ಉಗ್ರ)ವಾದದ್ದೊಂದು ಮುಖ, ಸೌಮ್ಯ (ಶಾಂತ)ವಾದದ್ದು ಇನ್ನೊಂದು ಮುಖ. ಒಂದರಿಂದ ಕಾಡುತ್ತಾನೆ. ಹಿಂಸಿಸುತ್ತಾನೆ; ಇನ್ನೊಂದರಿಂದ ಕಾಪಾಡುತ್ತಾನೆ, ಸಲಹುತ್ತಾನೆ. ಎರಡನೆಯ ಮುಖ ದಕ್ಷಿಣವೆನಿಸಿಕೊಳ್ಳುತ್ತದೆ ('ಶೇಮುಷೀ ದಕ್ಷಿಣಾ ಪ್ರೋಕ್ತಾ'; 'ಶೇ' ಎಂದರೆ ಅಜ್ಞಾನ; 'ಮುಷೀ' ಎಂದರೆ ಅದನ್ನು ತೊಲಗಿಸುವುದು). ಈ ದಕ್ಷಿಣ ಮುಖ ಅನುಗ್ರಹದ, ಜ್ಞಾನದ, ಮುಕ್ತಿಯ ಸಂಕೇತ.

ಸ್ವಾಧ್ಯಾಯಃ

ಓಂ ಬ್ರಹ್ಮವಾದಿನೋ ವದಂತಿ । ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ । ಯತ್ ಪ್ರಯಂತ್ಯಭಿಸಂವಿಶಂತಿ । ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ ॥ ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಆನಂದೇನ ಜಾತಾನಿ ಜೀವಂತಿ । ಆನಂದಂ ಪ್ರಯಂತ್ಯಭಿಸಂವಿಶಂತಿ ॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್‌ನ ಬಿಭೇತಿ ಕುತಶ್ಚನ ॥

ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ ।
ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ
ಆನಂದೋ ನ ಸ್ಯಾತ್ ॥

ಏಷ ಹ್ಯೇವಾನಂದಯಾತಿ । ಯದಾಹ್ಯೇವೈಷ
ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽಭಯಂ
ಪ್ರತಿಷ್ಠಾಂ ವಿಂದತೇ । ಅಥ ಸೋಽಭಯಂಗತೋ ಭವತಿ ।

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್‌ನ ಬಿಭೇತಿ ಕದಾಚನ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ಹರಿಃ ಓಂ ॥

ಏಷಾಸ್ಯ ಪರಮಾ ಗತಿರೇಷಾಸ್ಯ ಪರಮಾ ಸಂಪತ್ ಏಷೋಽಸ್ಯ ಪರಮೋ ಲೋಕ ಏಷೋಽಸ್ಯ ಪರಮ ಆನಂದಃ। ಏತಸ್ಯೇವಾ-ನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ಹರಿಃ ಓಂ ॥

ಬ್ರಹ್ಮವಾದಿಗಳು ಹೇಳುತ್ತಾರೆ—ಯಾವುದರಿಂದ ಈ ಎಲ್ಲ ಪ್ರಾಣಿಗಳೂ ಹುಟ್ಟಿಬರುವುವೋ, ಯಾವುದರಿಂದ ಇವೆಲ್ಲವೂ ಬದುಕಿರುವುವೋ ಮತ್ತು ಯಾವುದರಲ್ಲಿ ಇವೆಲ್ಲವೂ ಮುಳುಗಿ ಮರೆಯಾಗುವುವೋ, ಅದನ್ನೆ ಬ್ರಹ್ಮವೆಂದು ತಿಳಿ. ಆನಂದದಿಂದಲೆ ಇವೆಲ್ಲವೂ ಹೊರಹೊಮ್ಮುತ್ತವೆ; ಆನಂದದಿಂದಲೇ ಬದುಕಿಬಾಳುತ್ತವೆ ಮತ್ತು ಆನಂದದಲ್ಲೆ ಮುಳುಗಿ ಮರೆಯಾಗುತ್ತವೆ.

ಮಾತು ಅವನನ್ನು ಮುಟ್ಟಲಾರದು, ಅವನೆಡೆಗೆ ಹೋದದ್ದು ಅವನನ್ನು ಸೇರಲರಿಯದೆ ಹಿಂದೆ ಬರುತ್ತದೆ; ಮನಸ್ಸೂ ಹಾಗೆಯೇ. ಬ್ರಹ್ಮನ ಆನಂದವನ್ನು ಅರಿತುಕೊಂಡವನಿಗೆ ಎಲ್ಲಿಯೂ ಭಯವಿರದು.

ಅವನು ರಸವೇ. ಆ ರಸವನ್ನು ಪಡೆದುಕೊಂಡವನು ಆನಂದ ಪಡುತ್ತಾನೆ. ಒಡಲೊಳಗಿರುವ ಬಯಲಲ್ಲಿ ಆನಂದವಿರದಿದ್ದರೆ ಉಸಿರಾಡುವವನು ಯಾರು, ಬದುಕಿರುವವನು ಯಾರು ?

ಆನಂದವನ್ನು ಒದಗಿಸುವವನು ಅವನೇ. ಯಾವನು ಕಣ್ಣಿಗೆ ಕಾಣಸಿಗದ, ಜೀವಭಾವವನ್ನು ಹೊಂದದ, ವಿವರಿಸಲಾರದ, ನೆಲೆಯಿರದ, ಭೀತಿಯಿರದ ಈ ಆತ್ಮನಲ್ಲಿ ನೆಲೆಗೊಳ್ಳುವನೋ ಅವನ ಭಯವು ತೊಲಗಿಹೋಗುತ್ತದೆ.

ಮಾತೂ ಮನಸ್ಸೂ ಯಾವನನ್ನು ಮುಟ್ಟಲಾರದೆ ಹಿಂದಿರುಗುವುವೋ ಅಂಥ ಬ್ರಹ್ಮನ ಆನಂದವನ್ನು ಅರಿತವನು ಎಂದಿಗೂ ಭಯಗೊಳ್ಳಲಾರ.

॥ ಓಂ ಶಾಂತಿಃ, ಶಾಂತಿಃ, ಶಾಂತಿಃ ॥

॥ ಹರಿಃ ಓಂ ॥

ಇವನಿಗೆ ಇದೇ ಅತಿ ಹೆಚ್ಚಿನ ನೆಲೆ, ಅತಿ ದೊಡ್ಡ ಸಂಪತ್ತು; ಇದೇ ಇವನಿಗೆ ಅತಿ ಮೇಲಿನ ಲೋಕ, ಇದೇ ಇವನಿಗೆ ದೊಡ್ಡ ಆನಂದ. ಪ್ರಾಣಿಗಳು ವ್ಯವಹಾರದಲ್ಲಿ ಆನಂದವನ್ನು ಅನುಭವಿಸಿದರೆ ಈ ಆನಂದದ ತುಣುಕುಗಳನ್ನಷ್ಟೆ ಅನುಭವಿಸುವುದು.

॥ ಓಂ ಶಾಂತಿಃ, ಶಾಂತಿಃ, ಶಾಂತಿಃ ॥

॥ ಹರಿಃ ಓಂ ॥

ವಿವರಣೆ

'ಬ್ರಹ್ಮವಾದಿನೋ ವದಂತಿ' (ಬ್ರಹ್ಮವಾದಿಗಳು ಹೇಳುತ್ತಾರೆ) ಎಂಬುದು ಶ್ವೇತಾಶ್ವತರೋಪನಿಷತ್ತಿನ ಮೊದಲಲ್ಲಿ ಬರುತ್ತದೆ. ಬ್ರಹ್ಮನನ್ನು ಸ್ವಾನುಭವದಿಂದ ಅರಿತುಕೊಂಡವರು ಬ್ರಹ್ಮವಿದರು; ತಾವು ಅನುಭವದಿಂದ ಅರಿತುಕೊಂಡ ಬ್ರಹ್ಮನನ್ನು ಇತರ ಜಿಜ್ಞಾಸುಗಳಿಗೆ ತಿಳಿಯಪಡಿಸುವವರು ಬ್ರಹ್ಮವಾದಿಗಳು, ಎಂದರೆ ಋಷಿಗಳು. ಉಪನಿಷತ್ತುಗಳೆಲ್ಲವೂ ಋಷಿಗಳ ಉಪದೇಶವೇ.

ಮಹರ್ಷಿ ದೇವೇಂದ್ರನಾಥ ಠಾಕುರರು ಸಿದ್ಧಪಡಿಸಿದ ಬ್ರಾಹ್ಮಧರ್ಮವೆಂಬ ಗ್ರಂಥ ಈ ವಾಕ್ಯದಿಂದಲೇ ಆರಂಭವಾಗುತ್ತದೆ. ಸ್ವಾಧ್ಯಾಯವೆಂಬ ಈ ಭಾಗದಲ್ಲಿರುವ ಉಳಿದ ವಾಕ್ಯಗಳೂ ಕೂಡ ತೈತ್ತಿರೀಯೋಪನಿಷತ್ತಿನಲ್ಲಿರುವ ಆ ಗ್ರಂಥದ ಮೊದಲಲ್ಲೆ ಬರುತ್ತವೆ. ಅವುಗಳ ವಿವರಣೆಯನ್ನು ಅಲ್ಲಿ ನೋಡಬಹುದು.

ಈ ಭಾಗವನ್ನು ಸ್ವಾಧ್ಯಾಯವೆಂದು ಕರೆದಿದ್ದಾರೆ. ಮೂಲಾರ್ಥದಲ್ಲಿ ಸ್ವಾಧ್ಯಾಯವೆಂದರೆ ಚೆನ್ನಾಗಿ ಮತ್ತೆ ಮತ್ತೆ, ಅಧ್ಯಯನ ಮಾಡುವುದು (ಸುಷ್ಠು

ಆವೃತ್ಯ ಅಧ್ಯಾಯಃ ಅಧ್ಯಯನಂ). ವೇದಾಧ್ಯಯನಕ್ಕೆ ಇದೊಂದು ಹೆಸರು. ಜಪವೆನ್ನುವುದೂ ಅದೇ ಅರ್ಥದಲ್ಲಿದೆ ('ಸ್ವಾಧ್ಯಾಯೋ ಜಪ ಇತ್ಯುಕ್ತೋ ವೇದಾಧ್ಯಯನ ಕರ್ಮಣಿ'). ತನಗೆ ತಾನೆ ಓದಿಕೊಳ್ಳುವುದೂ ಸ್ವಾಧ್ಯಾಯವೇ. ವೇದದ ಕಡೆಯ ಭಾಗವಾದ ಉಪನಿಷತ್ತಿನ ವಾಕ್ಯಗಳನ್ನು ಮನನ ಮಾಡುವುದು, ಆದರದಿಂದ ಅಭ್ಯಾಸಮಾಡುವುದು ಇಲ್ಲಿ ಸ್ವಾಧ್ಯಾಯವೆನಿಸಿಕೊಳ್ಳುತ್ತದೆ. ಬ್ರಹ್ಮೋಪಾಸನೆಯಲ್ಲಿ ಮುಖ್ಯವಾದ ವಿವರ ಇದೇ. ಇಡೀ 'ಬ್ರಾಹ್ಮಧರ್ಮ' ಇದಕ್ಕೆಂದೇ ಸಿದ್ಧವಾಗಿರುವುದು.

ಸ್ವಾಧ್ಯಾಯ ಭಾಗದಲ್ಲಿ ಕಡೆಯದು ಶಾಂತಿವಾಚನ. ಓಂ ಎಂದರೆ ಬ್ರಹ್ಮ; ಮೂರು ಬಾರಿ ಶಾಂತಿಯ ಕರೆಯನ್ನು ಕೊಟ್ಟಿರುವುದು ಮೂರು ಲೋಕಗಳಲ್ಲೂ (ಎಂದರೆ ಭೂಃ, ಅಂತರಿಕ್ಷ, ಸ್ವಃ) ಬ್ರಹ್ಮವಸ್ತುವಿನಿಂದಾಗಿ ಶಾಂತಿಯಿರಲಿ ಎಂಬರ್ಥದಲ್ಲಿ. ಆಧ್ಯಾತ್ಮಿಕ (ದೈಹಿಕ ಮತ್ತು ಮಾನಸಿಕ ರೋಗಗಳು, ರುಜಿನಗಳು) ಆಧಿಭೌತಿಕ (ಹೊರಗಡೆ ಜನರಿಂದಲೋ ಪ್ರಾಣಿಗಳಿಂದಲೋ ವಸ್ತುಗಳಿಂದಲೋ ಬರುವ ಉಪದ್ರವ) ಮತ್ತು ಆಧಿದೈವಿಕ (ಅತ್ಯಂತ ಶೀತ, ಬಿಸಿಲು, ಭೂಕಂಪ, ಮಳೆ, ಭೂತಪ್ರೇತ ಪಿಶಾಚಿಗಳು ಇವುಗಳಿಂದ ಉಂಟಾಗುವ ತೊಂದರೆ) ಈ ತಾಪ-ತ್ರಯದಿಂದ ತಪ್ಪಿಸಿಕೊಂಡು ನೆಮ್ಮದಿಯಾಗಿರುವುದೂ ಇದರ ತಾತ್ಪರ್ಯವೇ.

ಇದಾದಮೇಲೆ ಬಂದಿರುವ ಮಂತ್ರ ('ಏಷಾಸ್ಯ ಪರಮಾ ಗತಿಃ' ಎಂದು ಮೊದಲಾಗುವುದು ಬೃಹದಾರಣ್ಯಕೋಪನಿಷತ್ತಿನದು (೪, ೩, ೩೨). ಇದರ ವಿವರಣೆಯನ್ನೂ 'ಬ್ರಾಹ್ಮಧರ್ಮ' ದಲ್ಲಿ ನೋಡಬಹುದು.

ಉಪಸಂಹಾರಃ

ಓಂ ಯ ಏಕೋಽವರ್ಣೋ ಬಹುಧಾ ಶಕ್ತಿಯೋಗಾತ್
ವರ್ಣಾನನೇಕಾನ್ನಿಹಿತೋಽರ್ಥೋ ದಧಾತಿ ।
ವಿಚೈತಿ ಚಾಂತೇ ವಿಶ್ವಮಾದೌ ಸ ದೇವಃ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥

ಒಂದೇ ತತ್ತ್ವವಾಗಿ ಯಾವನು ಇರುವವನೋ ವರ್ಣವಿಲ್ಲದವನೋ, ಅವನು ಜೀವಜಂತುಗಳ ಪ್ರಯೋಜನವನ್ನರಿತು, ತನ್ನದೆ ಅನೇಕ ಪ್ರಕಾರದ ಶಕ್ತಿಯನ್ನು ಬಳಸಿಕೊಂಡು, ವಿವಿಧ ಕಾಮ್ಯ ವಸ್ತುಗಳನ್ನು ಅವುಗಳಿಗಾಗಿ ನಿರ್ಮಾಣ ಮಾಡಿದ್ದಾನೆಯೋ, ಯಾವನು ಇಡೀ ಬ್ರಹ್ಮಾಂಡದ ಆದಿ, ಮಧ್ಯ, ಅಂತಗಳಲ್ಲಿ ವ್ಯಾಪ್ತನಾಗಿರುವನೋ, ಅವನು ದೇದೀಪ್ಯಮಾನನಾದ ಪರಮೇಶ್ವರನೇ. ಅವನು ನಮಗೆ ಮಂಗಳವಾದ ಬುದ್ಧಿಯನ್ನು ಕರುಣಿಸಲಿ.

॥ ಓಂ ಏಕಮೇವಾದ್ವಿತೀಯಂ ॥

ವಿವರಣೆ

ಬ್ರಹ್ಮೋಪಾಸನೆಯ ಕಡೆಯ ಹಂತ ಇದು. ಇಲ್ಲಿಗೆ ಉಪಾಸನೆಯು ಮುಗಿಯುತ್ತದೆಯಾದ್ದರಿಂದ 'ಉಪಸಂಹಾರ'.

ಈ ಮಂತ್ರವು ಶ್ವೇತಾಶ್ವರೋಪನಿಷತ್ತಿನಿಂದ (೪,೧) ಆಯ್ದುಕೊಂಡಿರುವುದು. ಬ್ರಹ್ಮವಸ್ತುವನ್ನು ವರ್ಣ, ರೂಪ, ಆಕಾರ, ನಾಮ, ಗುಣ ಮೊದಲಾದ ಯಾವ ವಿವರದಿಂದಲೂ ನಿರ್ದೇಶನವನ್ನೂ ಮಾಡಲಾಗದು. ಉಪಲಕ್ಷಣವಾಗಿ 'ಅವರ್ಣ'. ಆದರೆ ಅನೇಕ ವರ್ಣ, ರೂಪ, ಆಕಾರ, ನಾಮ, ಗುಣಗಳನ್ನು ಹೊಂದಿರುವ ಈ ಪ್ರಪಂಚವು ಆ ಬ್ರಹ್ಮನಿಂದಲೇ ಆದುದು,

ಆದರಿಂದಲೇ ವ್ಯವಸ್ಥೆಗೊಂಡುದು. ಇದು ಪರಬ್ರಹ್ಮನ ವಿಚಿತ್ರಾದ್ಭುತ, ಅಚಿಂತ್ಯಾಪೂರ್ವಶಕ್ತಿಯಿಂದ ಸಾಧ್ಯವಾಗಿದೆ. ಎಲ್ಲಕ್ಕೂ ಅವನೇ ಕಾರಣ, ಎಲ್ಲ ಇರುವುದು ಅವನಿಂದಲೇ, ಎಲ್ಲವೂ ಕಡೆಯಲ್ಲಿ ಮರೆಯಾಗುವುದು ಅವನಲ್ಲೇ. ಇಂಥ ಪರಮೇಶ್ವರನು ನಮಗೆ ಸದ್ಗತಿಯನ್ನು ನೀಡಬೇಕು, ಒಳ್ಳೆಯ ದಾರಿಯಲ್ಲಿ ನಮ್ಮನ್ನು ನಡೆಸಬೇಕು, ಸಂಸಾರದಿಂದ ಮುಕ್ತಿಯನ್ನು ಕರುಣಿಸಬೇಕು. ಇದಕ್ಕೆ ಕಾರಣವಾಗುವುದು ಸದ್ ಬುದ್ಧಿ, ಶುಭ (ಮಂಗಳ, ಕಲ್ಯಾಣ)ದಲ್ಲಿಯೇ ನೆಟ್ಟ ಮನಸ್ಸು. ಇದು ಒದಗುವುದೂ ಪರಮೇಶ್ವರನ ಅನುಗ್ರಹದಿಂದಲೇ.

ಹಾಗೆ ನಮ್ಮನ್ನು ಶುಭವಾದ ಬುದ್ಧಿಯೊಂದಿಗೆ ಸೇರಿಸೆಂದು ಪರಮೇಶ್ವರನಲ್ಲಿ ಪ್ರಾರ್ಥನೆ. ನಮ್ಮಲ್ಲಿಗೆ ಒಳ್ಳೆಯ ಭಾವನೆಗಳು ಬಂದು ಸೇರಿಕೊಳ್ಳಲಿ ಎನ್ನುವುದಕ್ಕಿಂತ ಒಳ್ಳೆಯ ಭಾವನೆಗಳೊಂದಿಗೆ ನಾವು ಸೇರಿಕೊಳ್ಳುವಂತಾಗಲಿ ಎನ್ನುವುದು ಹೆಚ್ಚು ಸಮಂಜಸ. ಒಳ್ಳೆಯ ಭಾವನೆಗಳು ಭಗವಂತನಿಗೆ ಸೇರಿದುವು; ಎಲ್ಲ ಮನುಷ್ಯರಿಗೂ ಸಮನಾಗಿಯೇ ಇರುವಂಥವು. ವ್ಯಕ್ತಿಗಳು ತಮ್ಮ ಮನಸ್ಸನ್ನು ಶುದ್ಧಿಗೊಳಿಸಿಕೊಂಡು, ಸಂಕಲ್ಪಿಸಿದರೆ ಮನಸ್ಸು ಆ ಒಳ್ಳೆಯ ಭಾವನೆಗಳತ್ತ ಸರಿಯುವುದಾಗುತ್ತದೆ, ಒಳ್ಳೆಯ ಭಾವನೆಗಳನ್ನೆ ತನ್ನಲ್ಲಿ ಮೂಡಿಸಿಕೊಳ್ಳುವುದಾಗುತ್ತದೆ.

ಈ ಮಂತ್ರದಲ್ಲಿ ಬಂದಿರುವುದು ಈ ಸಂಕಲ್ಪದ ವಿಚಾರ.

೬. ಶಾಂತಿಪಾಠ

ಓಂ ಆಪ್ಯಾಯಂತು ಮಮಾಂಗಾನಿ
ವಾಕ್ ಪ್ರಾಣಶ್ಚಕ್ಷುಃಶ್ರೋತ್ರಮಥೋ ।
ಬಲಮಿಂದ್ರಿಯಾಣಿ ಚ ಸರ್ವಾಣಿ
ಸರ್ವಂ ಬ್ರಹ್ಮೌಪನಿಷದಂ ॥

ಮಾಹಂ ಬ್ರಹ್ಮ ನಿರಾಕುರ್ಯಾಂ
ಮಾ ಮಾ ಬ್ರಹ್ಮ ನಿರಾಕರೋದನಿರಾಕರಣ-
ಮಸ್ತ್ವನಿರಾಕರಣಂ ಮೇಽಸ್ತು ।
ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ
ಮಯಿ ಸಂತು ತೇ ಮಯಿ ಸಂತು ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥
॥ಹರಿಃ ಓಂ ॥

ಉಪನಿಷತ್ತುಗಳಿಂದ ತಿಳಿಯಲ್ಪಡುವ, ಸರ್ವಾಂತರ್ಯಾಮಿಯಾದ, ಪರಬ್ರಹ್ಮನು ನಮ್ಮ ಎಲ್ಲ ಅಂಗಾಂಗಗಳನ್ನೂ ತೃಪ್ತಿಗೊಳಿಸಲಿ. ಬ್ರಹ್ಮನು ನನ್ನನ್ನು ಎಂದೂ ಪರಿತ್ಯಾಗ ಮಾಡದಿರಲಿ; ನಾನೂ ಬ್ರಹ್ಮನನ್ನು ಎಂದೂ ಬಿಡುವುದಿಲ್ಲ. ಅವನು ಯಾವಾಗಲೂ ಅಪರಿತ್ಯಕ್ತನಾಗಿಯೆ ಇರಲಿ. ನನ್ನಿಂದ ಅವನೆಂದೂ ಪರಿತ್ಯಕ್ತನಾಗುವುದು ಬೇಡ. ನಾನೆಂದೂ ಪರಮಾತ್ಮನಲ್ಲೇ ತೊಡಗಿರುವೆನು. ಹಾಗಿರುವಾಗ ಉಪನಿಷತ್ತುಗಳಲ್ಲಿ ಯಾವ ಧರ್ಮಗಳುಂಟೋ ಅವು ನನ್ನಲ್ಲಿ ಕೂಡಿಬರಲಿ, ನನ್ನಲ್ಲಿ ಕೂಡಿಬರಲಿ (ಇಲ್ಲಿಗೆ ಪಾಠ ಮುಗಿಯಿತು ಎಂದು ಸೂಚಿಸಲು ದ್ವಿರುಕ್ತಿ)

ಈ ಮಂತ್ರವು ಛಾಂದೋಗ್ಯೋಪನಿಷತ್ತಿನ ಮತ್ತು ಕೇನೋಪನಿಷತ್ತಿನ ಶಾಂತಿಪಾಠ. ಶಾಂತಿಪಾಠವಾದಮೇಲೆ ಮೂರು ಬಾರಿ ಶಾಂತಿವಾಚನ. ಅದರ ನಂತರ ಬಂದಿರುವ 'ಹರಿಃ ಓಂ' ಎಂಬುದು ಪ್ರಶ್ನೋಪನಿಷತ್ತಿನ ಮಾತು. ಹರಿಯೆಂದರೆ ಅಂತರ್ಯಾಮಿ; ಓಂ ಎಂದರೆ ಪರಬ್ರಹ್ಮ. ಅಖಿಲ ಬ್ರಹ್ಮಾಂಡದ ನಿಯಾಮಕನಾದ ಬ್ರಹ್ಮನೇ ನನ್ನ ಒಡಲಲ್ಲಿ ಅಡಗಿರುವ ಆಕಾಶದಲ್ಲೂ ಇದ್ದುಕೊಂಡು ನನ್ನನ್ನೂ ನಿಯಮನಮಾಡುತ್ತಿದ್ದಾನೆಂದು ಅರ್ಥ.

[ಈ ಶಾಂತಿಪಾಠವು 'ಬ್ರಾಹ್ಮಧರ್ಮ'ದ ಪ್ರಥಮಖಂಡದ ಕಡೆಯಲ್ಲಿ ಬಂದಿದೆ. ಬ್ರಹ್ಮೋಪಾಸನೆಯಲ್ಲಿ ಸೇರಿ ಬಂದಿಲ್ಲವಾದರೂ ಈ ಪ್ರಕರಣ ಮುಗಿಯುವಾಗ ಇದು ಪ್ರಸ್ತುತವಾಗುತ್ತದೆ ಎಂಬ ಕಾರಣದಿಂದ ಇಲ್ಲಿ ಅಳವಡಿಸಿಕೊಳ್ಳಲಾಗಿದೆ.]

೭. ಅನುಬಂಧ

'ಬ್ರಹ್ಮೋಪಾಸನೆ'ಯಲ್ಲಿ ಮಹರ್ಷಿ ದೇವೇಂದ್ರನಾಥ ಠಾಕುರರು ಮೂಲ ಸಂಸ್ಕೃತ ಮಂತ್ರಗಳನ್ನೂ, ಅವುಗಳ ಬಂಗಾಳಿ ಅನುವಾದವನ್ನೂ ಅವುಗಳಿಗೆ ಯಥೋಚಿತವಾಗಿ ಟೀಕೆ ವ್ಯಾಖ್ಯಾನಗಳನ್ನೂ ಬಂಗಾಳಿಯಲ್ಲೇ ಸಿದ್ಧಪಡಿಸಿದರು. ಈ ಸಣ್ಣ ಹೊತ್ತಿಗೆಯನ್ನು ಅವರ ಮಗ ಶ್ರೀ ಸತ್ಯೇಂದ್ರನಾಥ ಠಾಕುರರು (ವಿಶ್ವಕವಿ ರವೀಂದ್ರನಾಥ ಠಾಕುರರ ಅಣ್ಣ) ಇಂಗ್ಲೀಷಿನಲ್ಲಿ ತರ್ಜುಮೆ ಮಾಡಿ ತಮ್ಮ ತಂದೆಯವರು ಸಂಪಾದಕರಾಗಿದ್ದ 'ತತ್ತ್ವಬೋಧಿನೀ ಪತ್ರಿಕಾ' ಎಂಬ ಪತ್ರಿಕೆಯಲ್ಲಿ ಪ್ರಚುರಪಡಿಸಿದರು (೧೮೬೨ ರ ಸುಮಾರಿಗೆ)

ಸತ್ಯೇಂದ್ರನಾಥ ಠಾಕುರರು ಸ್ವತಃ ಕವಿಗಳು. ತಮ್ಮ ಸೋದರರಾಗಿದ್ದ ಗಣೇಂದ್ರನಾಥ ಠಾಕುರರು ಮತ್ತು ಜ್ಯೋತಿರಿಂದ್ರನಾಥ ಠಾಕುರರೊಂದಿಗೆ ಆಗ ಬಂಗಾಳದಲ್ಲಿ ದೇಶಾಭಿಮಾನವನ್ನು ಪುನರುಜ್ಜೀವನಗೊಳಿಸುವ ಆಂದೋಳನದಲ್ಲಿ ತೊಡಗಿದ್ದರು. ಈ ಆಂದೋಳನದ ಅಂಗವಾಗಿ ರಾಜನಾರಾಯಣ ವಸು, ಭೂದೇವ ಮುಖೋಪಾಧ್ಯಾಯ, ನವಗೋಪಾಲಮಿತ್ರ ಮೊದಲಾದವರು ೧೮೬೫ ರಲ್ಲಿ 'ರಾಷ್ಟ್ರಾಭಿಮಾನಿಗಳ ಸಂಘ'ವೊಂದನ್ನು ಸ್ಥಾಪಿಸುವಲ್ಲಿ ಈ ಸೋದರರು ನೆರವಾಗಿದ್ದರು. ಇವರೆಲ್ಲ ಕೂಡಿ ಎರಡು ವರ್ಷಗಳ ನಂತರ 'ಹಿಂದೂಮೇಳ'ವೊಂದನ್ನು ಏರ್ಪಡಿಸಿದರು. ಇದು ಆರಂಭವಾದುದು ಸತ್ಯೇಂದ್ರನಾಥ ಠಾಕುರರು ತಾವೇ ರಚಿಸಿದ್ದ ಒಂದು ದೇಶಭಕ್ತಿಗೀತೆಯನ್ನು ಪಠಿಸಿದ ನಂತರವೇ. ಸತ್ಯೇಂದ್ರನಾಥರು ೧೮೬೩ರಲ್ಲೇ ಮೊಟ್ಟಮೊದಲ ಭಾರತೀಯ ಐ.ಸಿ.ಎಸ್. ಆಗಿದ್ದವರು; ಆದರೂ ದೇಶಾಭಿಮಾನದಲ್ಲೇನು ಹಿಂದೆ ಬೀಳಲಿಲ್ಲ. ಹಿಂದೂ ಧರ್ಮವೆಂದರೆ ತುಂಬ ಒಲವನ್ನು ಬೆಳೆಸಿಕೊಂಡಿದ್ದರು. ಉಪನಿಷತ್ತುಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು, ಬಂಗಾಳಿಯಲ್ಲೂ ಇಂಗ್ಲೀಷಿನಲ್ಲೂ ಸಮರ್ಥರಾದ ಕವಿಗಳು, ಬರಹಗಾರರು.

ಇವರು ತಮ್ಮ ತಂದೆಯವರ 'ಬ್ರಹ್ಮೋಪಾಸನೆ'ಯನ್ನು ಇಂಗ್ಲೀಷಿಗೆ ಅನುವಾದ ಮಾಡುವಾಗ ಮೂಲಕ್ಕೆ ಭಂಗಬರದಂತೆ, ಆದರೆ ಅದರ ಭಾವವನ್ನು ಇನ್ನಷ್ಟು ಉಜ್ಜ್ವಲಗೊಳಿಸುವಂತೆ ಮಾಡಿದ್ದಾರೆ. ಅದಕ್ಕೇ ಒಂದು ವಿಶಿಷ್ಟವಾದ ಮೌಲ್ಯವಿದೆ. ಆದರೆ ಅದು ಪತ್ರಿಕೆಯಲ್ಲಿ ಪ್ರಕಟವಾಯಿತಾಗಿ, ಎಲ್ಲರಿಗೆ ದೊರಕುವಂತಿರಲಿಲ್ಲ. ಕಲಕತ್ತೆಯ ಸಾಧಾರಣ ಬ್ರಾಹ್ಮಸಮಾಜದವರು

೧೯೨೭ರಲ್ಲಿ ಮಹರ್ಷಿಗಳು ಸಿದ್ಧಪಡಿಸಿದ ಬ್ರಾಹ್ಮ ಧರ್ಮ ಎಂಬ ಬಂಗಾಳಿ ಗ್ರಂಥದ ಇಂಗ್ಲೀಷ್ ಆವೃತ್ತಿಯನ್ನು ಹೊರತರುವಾಗ ಶ್ರೀ ತಪೋವ್ರತ ಬ್ರಹ್ಮಚಾರಿಗಳ ಸೂಚನೆಯಂತೆ ಸತ್ಯೇಂದ್ರನಾಥರ 'ಬ್ರಹ್ಮೋಪಾಸನೆ'ಯ ಆಂಗ್ಲರೂಪವನ್ನೂ ಅನುಬಂಧವಾಗಿ ಪುನರ್ಮುದ್ರಣ ಮಾಡಿದರು (೨೧೧ ವಿಧಾನ ಸರಣಿ, ಕಲಕತ್ತಾ; ಕಾರ್ಯದರ್ಶಿಯಾಗಿದ್ದವರು ಶ್ರೀ ಲಕ್ಷ್ಮೀನಾರಾಯಣ ರಾಯ್). ಮಹರ್ಷಿಗಳ 'ಬ್ರಾಹ್ಮಧರ್ಮದ' ಆಂಗ್ಲಾನುವಾದ ಮಾಡಿದವರು ಶ್ರೀ ಹೇಮಚಂದ್ರ ಸರ್ಕಾರರು. ಇದಕ್ಕೆ ಅನುಬಂಧವಾಗಿ ಬಂದಿರುವ 'ಬ್ರಹ್ಮೋಪಾಸನೆ' ಯ ಭಾಗವನ್ನು ಪ್ರಸ್ತುತ ಕನ್ನಡ ಪುಸ್ತಕದಲ್ಲಿ ಯಥಾವತ್ತಾಗಿ ಕೊಡಲಾಗಿದೆ, ಸತ್ಯೇಂದ್ರನಾಥ ಠಾಕುರರ ಅನುವಾದದ ಸೊಗಸನ್ನೂ ಸ್ವಾರಸ್ಯವನ್ನೂ ಓದುಗರು ಸವಿಯಬಹುದೆಂದು.

Brahmo Dharma

CREED

1. In the beginning was the one God, none else, and naught but He, the Creator of all things.

2. He is the True, the Good, the Infinite. He is the Eternal Lord of the universe, the All-knowing, All-pervading, All-protecting, the Almighty. He is the Formless, Changeless, Self- contained and Perfect. He is the One and Absolute, there is none like unto Him.

3. In His worship lies our good, in this world and in the next.

4. To love Him and to do His will,—this is His true worship.

INITIATION

I accept this creed as my own, and embrace the Brahmo faith.

1. Loving Him and doing, His will, I shall worship the One, Absolute Parabrahma, the Creator, Preserver and Destroyer, who is the Giver of all good in this world and the next, who is All-knowing, All-pervading, Formless and Beneficent.

2. I shall not adore any created thing, thinking it to be Parabrahma.

3. Unless prevented by sickness or trouble, I shall daily, in loving reverence, hold communion of spirit with Parabrahma.

4. I shall endeavour to perform good deeds.

5. I shall endeavour to abstain from sinful deeds.

6. If I should ever, through delusion, be led into sin, I shall desist therefrom with sincere repentance.

7. I shall give something, out of my income, every year to the Brahmo Samaj, to promote the Brahmo faith.

O God, grant me strength to live in accordance with the sacred principles of the religion.

God, the One alone, the Absolute,
Ekamevadvitiyam

ब्रह्मोपासना

अर्च्चना

ॐ पिता नोऽसि, पिता नो बोधि,
नमस्तेऽस्तु, मा मा हिंसीः ।
विश्वानि देव सवितर्दुरितानि परासुव,
यद्भद्रं तन्न आसुव ।
नमः शम्भवाय च मयोभवाय च,
नमः शङ्कराय च मयस्कराय च,
नमः शिवाय च शिवतराय च ।

The Service

PRAYER

Thou art our Father ; as a father, teach us true wisdom; we bend low in reverence before Thee; save us from delusion and sin; forsake us not, destroy us not.

O God our Father, forgive us our trespasses, and send us that which is for our good.

Thou art the cause and source of all goodness and happiness. Thou art goodness itself, and more than good. We bow down to Thee.

प्रणामः

ॐ यो देवोऽग्नौ योऽप्सु
यो विश्वं भुवनमाविवेश,
य ओषधिषु यो वनस्पतिषु
तस्मै देवाय नमो नमः ।

SALUTATION

We bow down in reverence, again and yet to the deity who dwells in fire, in water, who is immanent in the universe, who is in plants as well as in the trees.

समाधानम्

ॐ सत्यं ज्ञानमनन्तं ब्रह्म
आनन्दरूपममृतं यद्विभाति
शान्तं शिवमद्वैतम् ॥

COMMUNION

He, who is our Creator, Protector and Giver of all happiness, the Life of all life and the Fount of all good, from Whose grace we derive our body and mind, our intellect and strength, our wisdom and piety, the constant Protector of our body and mind from manifold disasters, He is the True, All-wise and Infinite Parabrahma, revealing Himself in bliss and immortality. He is the peace, the Righteousness, the One above all.

With mind intent and full of love, I now hold communion of soul with this supreme spirit of good.

ॐ सपर्य्यगाच्छुक्रमकायमव्रण-
मस्नाविरं शुद्धमपापविद्धम्,
कविर्मनीषी परिभूः स्वयम्भू—
र्याथातथ्यतोऽर्थान् व्यदधाच्छाश्वतीभ्यः समाभ्यः ॥
एतस्माज्जायते प्राणो मनः सर्वेन्द्रियाणि च ।
खं वायुर्ज्योतिरापः पृथिवी विश्वस्य धारिणी ॥
भयादस्याग्निस्तपति भयात्तपति सूर्य्यः ।
भयादिन्द्रश्च वायुश्च, मृत्युर्धावति पञ्चमः ॥

He is all-pervading, stainless, formless, without infirmity or blemish, pure and sinless, free from all fleshly taints. He is the all-seeing Ruler of the mind; Highest of all is He and Self-revealed. He bestows on His creatures all things at all times according to their needs. He has given us our life, our mind and all our senses. He has created the sky, air, light, water and the receiving earth.

Through fear of Him the fire burns, the sun gives out its rays, the clouds pour forth rain, the winds blow, and death wanders through the world

.

ध्यानम्

ॐ भूर्भुवः स्वः । तत्सवितुर्वरेण्यं ।
भर्गो देवस्य धीमहि । धियो यो नः प्रचोदयात् ।

MEDITATION

Let me meditate on the benign wisdom and might of that Supreme Being, who reveals all worlds, who pervades all things, who is the highest good, the Creator of the universe, who sends us all our powers of thought.

स्तोत्रम्

ॐ नमस्ते सते ते जगत्कारणाय
नमस्ते चिते सर्व्वलोकाश्रयाय ।
नमोऽद्वैततत्त्वाय मुक्तिप्रदाय
नमो ब्रह्मणे व्यापिने शाश्वताय ॥

त्वमेकं शरण्यं त्वमेकं वरेण्यं
त्वमेकं जगत्पालकं स्वप्रकाशम् ।
त्वमेकं जगत्कर्त्तृ-पातृ-प्रहर्त्तृ
त्वमेकं परं निश्चलं निर्विकल्पम् ॥

भयानां भयं भीषणं भीषणानां
गतिः प्राणिनां पावनं पावनानाम् ।
महोच्चैः पदानां नियन्तृ त्वमेकं
परेषां परं रक्षणं रक्षणानाम् ॥

वयन्त्वां स्मरामो वयन्त्वाम्भजामो
वयन्त्वां जगत्साक्षिरूपं नमामः ।
सदेकं निधानं निरालम्बमीशं
भवाम्भोधि-पोतं शरण्यं व्रजामः ॥

HYMN

Thou art the Real, the prime cause of the Universe.
We bow to Thee.
Thou art the All-wise, the One Refuge of all.
We bow to Thee.
We bow to Thee, the Absolute, the Giver of salvation.
Thou art the Supreme, the Eternal.
All-present Brahma, we bow to Thee.
To Thee alone is honour due,
Thou alone art the Protector of all,

Thou alone preservest the Universe.
The self-revealed.
Thou alone art Creator, Preserver, and Destroyer of all,
Most high, motionless and fixed of purpose,
Thou the dread of all dreads,
The terror of the terrifying,
Thou art the End of all creatures,
The Purifier of all which purify,
Thou alone art the Ruler of all high estates,
Holier than the holiest,
The Guardian of those who guard,
We commune with Thee, we pray to Thee,
Thou art the Witness of the universe,
We bow to Thee,
Let us seek refuge in the One, absolute God,
Who is shelter, self-poised,
Who is our raft on the sea of life.

PRAYER

O divine Spirit, deliver us from all sins committed by ignorance of Thy purpose; keep our hearts free from all evil thoughts; make us diligent in righteous deeds which thou hast inspired, grant us with earnest reverence and love to think always of Thy boundless glory and unspeakable goodness, so that at the last we may attain our fulfilment in the beatitude of Thine Eternal union.

असतो मा सद्गमय, तमसो मा ज्योतिर्गमय, मृत्योर्माऽमृतं गमय। आविरावीर्म्म एधि। रुद्र, यत्ते दक्षिणं मुखं, तेन मां पाहि नित्यम्।

Lead me from the unreal to the real,
Lead me from darkness into light,
Lead me from death to life Eternal.
O Thou self-revealed, reveal Thyself to me,
O Terrible, ever protect me with thy
look benign.

स्वाध्याय:

ॐ ब्रह्मवादिनो वदन्ति । यतो वा इमानि भूतानि जायन्ते । येन जातानि जीवन्ति । यत् प्रयन्त्यभिसंविशन्ति । तद्विजिज्ञासस्व तद् ब्रह्म । आनन्दाद्ध्येव खल्विमानि भूतानि जायन्ते । आनन्देन जातानि जीवन्ति । आनन्दं प्रयन्त्यभिसंविशन्ति । यतो वाचो निवर्तन्ते । अप्राप्य मनसा सह । आनन्दं ब्रह्मणो विद्वान् । न बिभेति कुतश्चन । रसो वै सः । रसं ह्येवायं लव्ध्वाऽनन्दी भवति । कोह्येवान्यात्, कः प्राण्यात् । यदेष आकाश आनन्दो न स्यात् । एष ह्येवानन्दयाति । यदाद्येवैष एतस्मिन्नदृश्येऽनात्म्येऽ-निरुक्तेऽनिलयनेऽभयं प्रतिष्ठां विन्दते । अथ सोऽभयं गतो भवति । यतो वाचो निवर्तन्ते । आप्राप्य मनसा सह । आनन्दं ब्रह्मणो विद्वान् । न बिभेति कदाचन ।

ॐ शान्तिः शान्तिः शान्तिः हरिः ॐ

RECITATION

Thus say, the worshippers of Brahma :—

He from whom all creatures proceed, by whom their life is sustained, to whom they go forth, and into whom they enter at the end of time,—seek ye to know Him wholly; He is Brahma.

All creatures spring from Parabrahma who is Joy eternal.

After birth their life is preserved by Brahma who is joy eternal.

At the end of time, they go forth and enter into Brahma, who is Joy eternal.

He who has tasted the eternal joy of Parabrahma, before whom thoughts and words fail, he no longer knows fear.

That divine spirit is of joy all compact, and satisfies every longing of the heart. All creatures delight to attain that Parabrahma who is eternal bliss.

Who would ever live and move and have their being, if this divine spirit of joy did not fill the heavens? He it is who scatters delight through all worlds.

When the worshipper freely rests in this Parabrahma, who is invisible, formless, inexpressible and unbounded, he is released from fear.

He who has known the delights of that Parabrahma, before whom our thoughts and words fail, no longer knows any fear.

He is the highest goal of all creatures,
He is their greatest wealth,
He is their final abode,
He is their utmost joy,
All others enjoy only a particle of this ineffable bliss.
God the Eternal, Peace, Peace, Peace.

एषास्य परमा गतिरेषास्य परमा सम्पत् एषोऽस्य परमो लोक एषोऽस्य परम आनन्दः। एतस्यैवानन्दस्यान्यानि भूतानि मात्रामुपजीवन्ति।

ॐ शान्तिः शान्तिः शान्तिः हरिः ॐ

उपसंहारः

ॐ य एकोऽवर्णो बहुधा शक्तियोगात्
वर्णाननेकान्निहितार्थो दधाति।
विचैति चान्ते विश्वमादौ स देवः,
स नो बुद्ध्या शुभया संयुनक्तु।

CONCLUDING PRAYER

May God, the Transcendent, who knows the needs of all His creatures and supplies them by His manifold power, who pervades the universe from beginning to end, the shining Lord of all deities, inspire us with holy thoughts and aspirations.

॥ॐ एकमेवाद्वितीयम् ॥